ಅಧ್ಯಾತ್ಮಗ್ರಂಥಾವಳಿ

# ಲಕ್ಷ್ಮೀನರಸಿಂಹಸ್ತೋತ್ರಗಳು

ಮತ್ತು

# ಧನ್ಯಾಷ್ಟಕ

(ಭಾವಾರ್ಥ, ವಿವರಣೆ– ಸಮೇತ)

ಕ್ರಮಾಂಕ : ೪೪

ಪ್ರಕಾಶಕರು:

**ಅಧ್ಯಾತ್ಮಪ್ರಕಾಶಕಾರ್ಯಾಲಯ**

ಹೊಳೆನರಸೀಪುರ – ೫೭೩೨೧೧

ಮೊ : ೮೧೭೫–೫೭೩೮೨೦

೨೦೦೩

೧೯೬೩ ಮೊದಲನೆಯ ಮುದ್ರಣ ೧೦೦೦ ಪ್ರತಿಗಳು
೧೯೭೩ ಎರಡನೆಯ ಮುದ್ರಣ ೧೦೦೦ ಪ್ರತಿಗಳು
೧೯೯೧ ಮೂರನೆಯ ಮುದ್ರಣ ೧೦೦೦ ಪ್ರತಿಗಳು
೨೦೦೩ ನಾಲ್ಕನೆಯ ಮುದ್ರಣ ೧೦೦೦ ಪ್ರತಿಗಳು

ಪುಟಗಳು : iv + ೪೪

ಬೆಲೆ : ರೂ. ೧೦

ಇವರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದ

**All Rights Reserved**

ಅಕ್ಷರಜೋಡಣೆ :
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. 45, 3ನೇ ಮುಖ್ಯರಸ್ತೆ, ನಾಗಸಂದ್ರ,
ತ್ಯಾಗರಾಜನಗರ ಅಂಚೆ, ಬೆಂಗಳೂರು –28
ದೂರವಾಣಿ – 6764650

ಮುದ್ರಣಸ್ಥಾನ :
**ಸ್ಟ್ಯಾಂಡರ್ಡ್ ಪ್ರಿಂಟರ್ಸ್**
ಶಂಕರಮಠದ ರಸ್ತೆ
ಬೆಂಗಳೂರು – 19
ದೂರವಾಣಿ : 6521527

# ಪ್ರಕಾಶಕರ ಬಿನ್ನಹ

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ತಮ್ಮ ಪೂರ್ವಾಶ್ರಮದಲ್ಲಿ ೧೯೩೩ನೆಯ ಇಸವಿಯಲ್ಲಿ ಕಾರ್ಯಾಲಯದ ಮೂಲಕ ಪ್ರಕಾಶಗೊಳಿಸಿದ್ದ ಶ್ರೀಲಕ್ಷ್ಮೀನರಸಿಂಹಪಂಚರತ್ನ ಮತ್ತು ಧನ್ಯಾಷ್ಟಕ – ಎಂಬ ಎರಡು ಸ್ತೋತ್ರಗಳು (ಭಾವಾರ್ಥ, ವಿವರಣೆ ಸಹಿತ) ಪ್ರತಿಗಳೆಲ್ಲ ಮುಗಿದುಹೋಗಿದ್ದುದರಿಂದ ೧೯೬೩ರಲ್ಲಿ ಎರಡನೆಯ ಬಾರಿಗೆ ತಿದ್ದಿ ಸಂಸ್ಕರಿಸಿ ಪ್ರಕಟಿಸಲಾಗಿತ್ತು.

ಈ ಗ್ರಂಥವು ತೀರ ಚಿಕ್ಕದಾಯಿತೆಂದು ಕಂಡುಬಂದದ್ದರಿಂದ ಇದರ ಜೊತೆಗೆ "ಲಕ್ಷ್ಮೀನರಸಿಂಹಕರಾವಲಂಬನಸ್ತೋತ್ರ"ವನ್ನೂ ಹೊಸದಾಗಿ ಭಾವಾರ್ಥವಿವರಣೆಗಳ ಸಮೇತ ಕಾರ್ಯಾಲಯದ ಪಂಡಿತರಾಗಿರುವ ಅಧ್ಯಾತ್ಮವಿದ್ಯಾಪ್ರವೀಣ ವೇ|| ಹೆಚ್.ಎಸ್.ಲಕ್ಷ್ಮೀನರಸಿಂಹ–ಮೂರ್ತಿಗಳವರಿಂದ ಬರೆಯಿಸಿ ಮೂರನೆಯಬಾರಿಗೆ ೧೯೯೧ರಲ್ಲಿ ಮುದ್ರಿಸಲಾಗಿತ್ತು. ಈಗ ನಾಲ್ಕನೆಯಬಾರಿಗೆ ತಿದ್ದಿ ಸಂಸ್ಕರಿಸಿ ಪ್ರಕಟಿಸಲಾಗಿದೆ.

ಹೊಸದಾಗಿ ಅಧ್ಯಾತ್ಮವಿಚಾರವನ್ನು ಪ್ರಾರಂಭಿಸುವವರಿಗೂ ಹಾಗೂ ಬಾಲಕರು, ಸ್ತ್ರೀಯರು–ಮುಂತಾಗಿ ವೇದಾಂತಾಭಿರುಚಿಯುಳ್ಳ ಸಾಮಾನ್ಯ ಜಿಜ್ಞಾಸುಗಳಿಗೂ ಈ ಗ್ರಂಥವು ಹೆಚ್ಚು ಉಪಯೋಗಕರವಾದೀತೆಂದು ನಮ್ಮ ಆಶೆಯಿದೆ. ಎಂದಿನಂತೆ ವಾಚಕರು ಈ ಗ್ರಂಥವನ್ನು ಬರಮಾಡಿಕೊಂಡು ಓದಿ ನಮ್ಮ ಪ್ರಯತ್ನವನ್ನು ಪ್ರೋತ್ಸಾಹಿಸುವರೆಂದು ನಂಬಿದೆ.

ಇತಿ–

ಹೊಳೆನರಸೀಪುರ **ಪ್ರಕಾಶಕರು**

ತಾ || 13–11–2003

# ಪೀಠಿಕೆ

## (೧) ಲಕ್ಷ್ಮೀನರಸಿಂಹಪಂಚರತ್ನ

ಇದು ಶ್ರೀಶಂಕರಾಚಾರ್ಯವಿರಚಿತವೆಂದು ಪ್ರಸಿದ್ಧವಾಗಿದೆ. ವೇದಾಂತ ಸಿದ್ಧಾಂತಕ್ಕೆ ವಿರೋಧವಾದ ಯಾವ ವಿಷಯಗಳೂ ಇದರಲ್ಲಿಲ್ಲವಾದ್ದರಿಂದ ಇದು ಆಚಾರ್ಯರ ಕೃತಿಯೇ – ಎಂದು ನಂಬಲು ಅಡ್ಡಿಯಿಲ್ಲ. ಪ್ರಪಂಚವೆಲ್ಲವೂ ಆನಂದಮಯವೇ ಆಗಿದ್ದರೂ ಅದನ್ನು ಬ್ರಹ್ಮವಾಗಿ ಮನಗಂಡವರಿಗೆ ಮಾತ್ರ ನಿತ್ಯಾನಂದವು ದೊರಕುವದು; ಹಾಗಿಲ್ಲದೆ ಪ್ರಪಂಚರೂಪವಾಗಿಯೇ ಕಂಡರೆ ಅದೇ ದುಃಖರೂಪವಾಗಿ ತೋರುವದು– ಎಂಬ ಪರಮರಹಸ್ಯವನ್ನು ಈ ಸ್ತೋತ್ರವಲ್ಲಿ ಹೊರಗೆಡವಿದೆ. ವಿಷಯಗಳಲ್ಲಿ ದೋಷದೃಷ್ಟಿಯಿಂದ ಮನಸ್ಸನ್ನು ವಶಪಡಿಸಿಕೊಂಡು ಭಗವಂತನನ್ನು ಭಕ್ತಿಯಿಂದ ಭಜಿಸುವ ಜಿಜ್ಞಾಸುಗಳಿಗೆ ಈ ರಹಸ್ಯವು ಬಯಲಾಗುವದು ಎಂದೂ ಇಲ್ಲಿ ತಿಳಿಸಿದೆ.

## (೨) ಕರಾವಲಂಬನಸ್ತೋತ್ರ

"ಲಕ್ಷ್ಮೀನರಸಿಂಹ ಮಮ ದೇಹಿ ಕರಾವಲಂಬಮ್" ಎಂಬ ಧ್ರುವಪಲ್ಲವಿಯುಳ್ಳ ಹನ್ನೆರಡು ಪದ್ಯಗಳುಳ್ಳ ಈ ಸ್ತೋತ್ರವು 'ಮಾಧವೀಯ ಶಂಕರವಿಜಯ' ವ್ಯಾಖ್ಯಾನದಲ್ಲಿ ದೊರಕುತ್ತದೆ. ಈ ಸ್ತೋತ್ರದ ಕರ್ತೃಗಳೂ ಶ್ರೀಶಂಕರಾಚಾರ್ಯರೇ – ಎಂದು ಪ್ರಸಿದ್ಧಿ. ಗಹನವಾದ ಈ ಸಂಸಾರದಲ್ಲಿ ಭಗವಂತನೊಬ್ಬನೇ ಗತಿ; ಅವನ ಹೊರತು ಕಾಪಾಡುವವರು ಬೇರಾರೂ ಇಲ್ಲ – ಎಂಬ ಅಭಿಪ್ರಾಯವುಳ್ಳ ಈ ಸ್ತೋತ್ರವು ಸಾಹಿತ್ಯದೃಷ್ಟಿಯಿಂದ ರಸವತ್ತಾಗಿ ಹೆಣೆಯಲ್ಪಟ್ಟಿದೆ. ಆರ್ತಭಕ್ತಿಯ ಮೇಳನವೂ ಇದೆ. ಅಂತೂ ಭಕ್ತರಿಗೆಲ್ಲ ಪ್ರಿಯವಾದ ಸ್ತೋತ್ರವಿದು.

## (೩) ಧನ್ಯಾಷ್ಟಕ

ಇದೂ ಶ್ರೀ ಶಂಕರಾಚಾರ್ಯರ ಕೃತಿಯೆಂದು ಪ್ರಸಿದ್ಧವಾಗಿದೆ. ಜಗತ್ತಿನ ಹೊರತೋರಿಕೆಯಲ್ಲಿ ವಿರಕ್ತರಾಗಿ ಅದರ ತಿರುಳಾಗಿರುವ ಪರಮಾತ್ಮತತ್ತ್ವವನ್ನು ಕಂಡುಕೊಳ್ಳಲು ಪ್ರಯತ್ನಮಾಡುತ್ತಿರುವವರೇ ಧನ್ಯರು – ಎಂಬ ಅರ್ಥವನ್ನು ಇದು ಒಳಗೊಂಡಿದೆ.

**ವಿವರಣಕರ್ತರು.**

ಓಮ್ ||

# ಲಕ್ಷ್ಮೀನರಸಿಂಹಪಂಚರತ್ನ

* * * * *

ಚೇತೋಭೃಙ್ಗ ಭ್ರಮಸಿ ವೃಥಾ
 ಭವಮರುಭೂಮೌ ವಿರಸಾಯಾಮ್
ಭಜ ಭಜ ಲಕ್ಷ್ಮೀನರಸಿಂಹಾ–
 ನಘಪದಸರಸಿಜಮಕರನ್ದಮ್ || (ಧ್ರುವಪದ)

**ಭಾವಾರ್ಥ :** ಎಲೈ ಚಿತ್ತವೆಂಬ ದುಂಬಿಯೆ, ಯಾವ ಹೂವಿನ ರಸವೂ ಇಲ್ಲದ ಸಂಸಾರವೆಂಬ ಮರುಳುಕಾಡಿನಲ್ಲಿ ಸುಮ್ಮನೆ ತೊಳಲುತ್ತಿರುವೆಯಲ್ಲ ! ಲಕ್ಷ್ಮೀನರಸಿಂಹನ ಪಾಪನಿವಾರಕವಾದ ಪಾದಕಮಲದ ಮಕರಂದವನ್ನು ಸೇವಿಸು, ಸೇವಿಸು.

ವಿವರ :– ಪರಮಾತ್ಮನಿಗೆ ಇಂಥದ್ದೆಂದು ಗೊತ್ತಾಗಿರುವ ಹೆಸರಾಗಲಿ ರೂಪವಾಗಲಿ ಯಾವದೊಂದೂ ಇಲ್ಲವಾದರೂ ಭಕ್ತರ ಮೇಲೆ ಅನುಗ್ರಹವನ್ನು ತೋರಿಸುವದಕ್ಕಾಗಿ ಆ ದಯಾಳುವು ಯಾವ ರೂಪವನ್ನಾದರೂ ಯಾವ ಹೆಸರನ್ನಾದರೂ ತೆಗೆದುಕೊಳ್ಳುವನು. ಹೀಗೆ ಆತನು ತೆಗೆದುಕೊಂಡಿರುವ ಒಂದೊಂದು ನಾಮವೂ ಒಂದೊಂದು ರೂಪವೂ ಆಯಾ ಕಾಲಕ್ಕೆ ತಕ್ಕಂತೆ ಇರುವದಾದರೂ ಅದೇ ನಾಮದಿಂದ ಅದೇ ರೂಪದಲ್ಲಿ ಪರಮಾತ್ಮನ ಉಪಾಸನೆಯನ್ನು ಮಾಡಬೇಕೆಂಬ ಸಾಧಕರಿಗೆ ಯಾವ ಕಾಲಕ್ಕಾದರೂ ಅವು ಉಪಯೋಗವಾಗುವವು. ಈ ಪ್ರಕರಣದಲ್ಲಿ ಬಂದಿರುವ ಲಕ್ಷ್ಮೀನರಸಿಂಹನೆಂಬ ನಾಮರೂಪಗಳು ಇಂಥವುಗಳಾಗಿವೆ.

ಹಿರಣ್ಯಕಶಿಪುವೆಂಬ ದೈತ್ಯನು ತನ್ನ ಮಗನಾದ ಪ್ರಹ್ಲಾದನನ್ನು ಲೌಕಿಕ ವಿದ್ಯೆಗಳಲ್ಲಿ ನಿಪುಣನನ್ನಾಗಿ ಮಾಡಿ ರಾಜನೀತಿಯನ್ನು ಕಲಿಸಬೇಕೆಂದು ಶುಕ್ರಾಚಾರ್ಯರಲ್ಲಿ ವಿದ್ಯಾಭ್ಯಾಸಕ್ಕೆ ಬಿಡಲು ಅವರು ಅದರಂತೆ ಅವನಿಗೆ ವ್ಯವಹಾರಕ್ಕೆ ಬೇಕಾದ ತಿಳಿವಳಿಕೆಯನ್ನೆಲ್ಲ ಹೇಳಿಕೊಡಲಾರಂಭಿಸಿದರು. ಆದರೆ

ಪ್ರಹ್ಲಾದನಿಗೆ ಪರಮಾತ್ಮನಲ್ಲಿ ಭಕ್ತಿಯಿಡುವದೇ ಪರಮಪುರುಷಾರ್ಥವೆಂಬ ಸದ್ಬುದ್ಧಿಯುಂಟಾಗಿದ್ದದ್ದರಿಂದ ಅವನು ಲೌಕಿಕವಿದ್ಯೆಯಲ್ಲಿ ವಿರಕ್ತನಾಗಿದ್ದನು. ತಂದೆಯು ಇವನ ವಿದ್ಯಾಭಿವೃದ್ಧಿಯನ್ನು ತಿಳಿಯಬೇಕೆಂಬ ಕುತೂಹಲದಿಂದ 'ಇದುವರೆಗೆ ನೀನು ತಿಳಿದುಕೊಂಡಿರುವದರಲ್ಲೆಲ್ಲ ಸಾರವತ್ತಾದದ್ದನ್ನು ಹೇಳು' ಎಂದು ಕೇಳಲು, ಪ್ರಹ್ಲಾದನು ಶ್ರೀ ಮಹಾವಿಷ್ಣುವಿನ ಮಹಿಮೆಯನ್ನು ಕೊಂಡಾಡಿದನು. ಇದು ಹಿರಣ್ಯಕಶಿಪುವಿಗೆ ಒಗ್ಗದೆ ತನ್ನ ವೈರಿಗಳಾದ ದೇವತೆಗಳಲ್ಲಿ ಹೆಚ್ಚಿನ ಪ್ರೇಮವಿರುವ ವಿಷ್ಣುವನ್ನು ಇವನು ಕೊಂಡಾಡುತ್ತಾನಲ್ಲ ! – ಎಂಬ ಉದ್ವೇಗದಿಂದ ಮಗನಿಗೆ ಎಷ್ಟು ವಿಧವಾಗಿ ವಿಷ್ಣುಭಕ್ತಿಯನ್ನು ಬಿಡುವಂತೆ ಉಪದೇಶಮಾಡಿದರೂ ಪ್ರಹ್ಲಾದನು ಕೇಳದಿರಲು ಅವನನ್ನು ಬಗೆಬಗೆಯಾಗಿ ಹಿಂಸಿಸುತ್ತಾ ಬಂದನು. ಪ್ರಹ್ಲಾದನು ತಿಳಿದುಕೊಂಡಿದ್ದ ವಿಷ್ಣುಸ್ವರೂಪಕ್ಕೂ ಹಿರಣ್ಯಕಶಿಪುವು ತಿಳಿದುಕೊಂಡಿದ್ದ ಸ್ವರೂಪಕ್ಕೂ ಪೂರ ಅಂತರವಿತ್ತು. ಪ್ರಹ್ಲಾದನ ತಿಳಿವಳಿಕೆಯಲ್ಲಿ ವಿಷ್ಣುವೆಂದರೆ ನಮ್ಮೆಲ್ಲರಿಗೂ ಆತ್ಮನಾಗಿರುವ ಪರಮಾರ್ಥವಸ್ತು, ಸರ್ವವ್ಯಾಪಕನು, ಸರ್ವಜ್ಞನು, ಸರ್ವಶಕ್ತನು, ಭಕ್ತರನ್ನುದ್ಧರಿಸುವ ಕರುಣಾಮಯನು ; ಹಿರಣ್ಯಕಶಿಪುವಿನ ತಿಳಿವಳಿಕೆಯಲ್ಲಿ ವಿಷ್ಣುವೆಂದರೆ ಒಬ್ಬ ವ್ಯಕ್ತಿಯು, ದೈತ್ಯರ ದ್ವೇಷಿಯು, ದೇವತೆಗಳ ಪಕ್ಷವನ್ನು ವಹಿಸಿದವನು. ಈ ತಿಳಿವಳಿಕೆಯ ಭೇದದಿಂದ ಪ್ರಹ್ಲಾದನು ವಿಷ್ಣುವಿನಲ್ಲಿ ಪರಮಭಕ್ತನಾಗಿದ್ದನು. ಹಿರಣ್ಯಕಶಿಪುವು ವಿಷ್ಣುದ್ವೇಷಿಯಾಗಿ ಕಾಮಕ್ರೋಧಲೋಭಗಳಿಗೆ ಅಧೀನನಾಗಿ ಸಂಸಾರದುಃಖವನ್ನು ಅಭವಿಸುತ್ತಾ ಬಂದನು. ಕೊನೆಗೆ ತನ್ನ ಕ್ರೋಧವನ್ನು ತಡೆಯಲಾರದೆ ಒಂದು ದಿನ 'ಎಲೋ, ದೈತ್ಯರ ಕುಲಕ್ಕೇ ಬೆಂಕಿಹಾಕುವದಕ್ಕೆ ಪ್ರಯತ್ನಿಸುತ್ತಿರುವ ವಿಷ್ಣುಪಕ್ಷಪಾತಿಯೆ, ನಿನ್ನನ್ನು ಈಗಲೆ ಈ ಖಡ್ಗದಿಂದ ಕತ್ತರಿಸಿಹಾಕುವೆನು ; ನೀನು ಹೇಳುವಂತೆ ಆ ನಿನ್ನ ವಿಷ್ಣುವು ಸರ್ವವ್ಯಾಪಕನಾಗಿದ್ದರೆ, ಈ ಕಂಬದಲ್ಲೇಕೆ ಕಾಣಿಸುವದಿಲ್ಲ ? ಅವನು ನಿಜವಾಗಿಯೂ ಸರ್ವಶಕ್ತನೂ ದಯಾಮಯನೂ ಆದರೆ ನನ್ನನ್ನು ನಿಗ್ರಹಿಸಿ ನಿನ್ನನ್ನು ಬಿಡಿಸಿಕೊಳ್ಳಲಿ'' ಎಂದು ಪ್ರಹ್ಲಾದನನ್ನು ಹೊಡೆಯುವದಕ್ಕೆ ಕೈಯೆತ್ತಿದನು. ಕೂಡಲೆ ಪರಮಾತ್ಮನು ಅದೇ ಕಂಬದಲ್ಲಿ ನರಸಿಂಹರೂಪನಾಗಿ ತೋರಿಕೊಂಡು ಹೊರಕ್ಕೆ ಬಂದು ಹಿರಣ್ಯಕಶಿಪುವನ್ನು ಕೊಂದುಹಾಕಿ ತನ್ನ ಭಕ್ತನನ್ನು ಕಾಪಾಡಿದನು. ಈ ಕಥೆಯನ್ನು

ವಿಷ್ಣುಪುರಾಣ, ಭಾಗವತ – ಮುಂತಾದ ಪುರಾಣಗಳಲ್ಲಿ ರವಾಗಿ ಬರೆದಿರುತ್ತದೆ.

ಪ್ರಹ್ಲಾದನನ್ನು ಹೀಗೆ ಪರಮಾತ್ಮನು ಅನುಗ್ರಹಿಸಿದ್ದು ಕೃತಯುಗದಲ್ಲಿ ; ಆತನು ನರಸಿಂಹರೂಪವನ್ನು ತೆಗೆದುಕೊಂಡಿದ್ದು ಹಿರಣ್ಯಕಶಿಪುವಿಗೆ ಮನುಷ್ಯರಿಂದಾಗಲಿ ಮೃಗಗಳಿಂದಾಗಲಿ ಕೊಲೆಯಾಗಬಾರದೆಂದು ಬ್ರಹ್ಮನು ಕೊಟ್ಟಿದ್ದ ಒಂದಾನೊಂದು ವರವನ್ನು ಗೌರವಿಸುವದಕ್ಕಾಗಿ. ಆದರೂ ಈಗಲೂ ಈ ನರಸಿಂಹರೂಪವೂ ನರಸಿಂಹನೆಂಬ ಹೆಸರೂ ಭಗವಂತನಿಗೆ ಶಾಶ್ವತವಾಗಿ ಉಳಿದುಕೊಂಡಿವೆ. ನರಸಿಂಹನ ರೂಪದ ವಿಗ್ರಹಗಳ ಮೂಲಕ ಪರಮೇಶ್ವರನನ್ನು ಆರಾಧನೆಮಾಡುವವರು ಈಗಲೂ ಎಷ್ಟೋ ಜನರು ಇದ್ದಾರೆ ; ನರಸಿಂಹನೆಂಬ ಹೆಸರು ಈಗಲೂ ಭಕ್ತರಿಗೆ ಅಚ್ಚುಮೆಚ್ಚಾಗಿದೆ. ಪರಮಾತ್ಮನು ಪ್ರಹ್ಲಾದನನ್ನು ಕಾಪಾಡಿದಂತೆ ತನ್ನ ಭಕ್ತರನ್ನು ಯಾವಾಗಲಾದರೂ ಯಾವ ರೂಪಿನಿಂದಲಾದರೂ ಬಂದು ಕಾಪಾಡುವನೆಂಬುದೊಂದೇ ಇದಕ್ಕೆ ಕಾರಣವಲ್ಲ ; ಪರಮೇಶ್ವರನ ಲೀಲೆಯನ್ನೂ ಗುಣಗಳನ್ನೂ ನೆನಪುಕೊಡುವದರ ಜೊತೆಗೆ ನರಸಿಂಹನೆಂಬ ಮಾತಿನಲ್ಲಿ ಮತ್ತೊಂದು ತತ್ತ್ವವೂ ಅಡಗಿದೆ. ಪರಮಾತ್ಮನು ಮನುಷ್ಯ, ಮೃಗ – ಮುಂತಾದ ನಮಗೆ ಗೊತ್ತಿರುವ ರೂಪಗಳನ್ನಲ್ಲದೆ ನಮಗೆ ಪರಿಚಯವಿಲ್ಲದೆ ಇರುವ ನರಸಿಂಹರೂಪವನ್ನೂ ಅಂಗೀಕರಿಸಿರುವನಾದ್ದರಿಂದ ಆತನಿಗೆ ಗೊತ್ತಾದ ಒಂದು ರೂಪವಿಲ್ಲವೆಂಬ ತತ್ತ್ವವನ್ನೂ ನರಸಿಂಹರೂಪವು ಬೆಳಗುವದು. ನರಸಿಂಹನೆಂದರೆ ಪುರುಷೋತ್ತಮನೆಂಬರ್ಥವೂ ಆಗುವದರಿಂದ ಪರಮಾತ್ಮನು ಈ ಜಗತ್ತಿನ ಕ್ಷರ(ವ್ಯಕ್ತ)ರೂಪ, ಅಕ್ಷರ (ಅವ್ಯಕ್ತ) ರೂಪ– ಇವೆರಡನ್ನೂ ಮೀರಿದ ಆನಂದಸ್ವರೂಪನೆಂಬ ತತ್ತ್ವವನ್ನೂ ನರಸಿಂಹನೆಂಬ ಹೆಸರು ಸೂಚಿಸುವದು. ಇನ್ನು **'ಲಕ್ಷ್ಮೀನರಸಿಂಹ'**ನೆಂಬ ಹೆಸರಿನಲ್ಲಿರುವ ಸ್ವಾರಸ್ಯವೇನೆಂದರೆ, ಪರಮಾತ್ಮನೇ ಸಕಲವಿಧವಾದ ಸಂಪತ್ತಿಗೂ ಒಡೆಯನು. ಲಕ್ಷ್ಮಿಯು ಸಂಪತ್ತಿಗೆ ಅಧಿದೇವತೆಯೆಂದೂ ಸಿದ್ಧಲಕ್ಷ್ಮಿ, ಜಯಲಕ್ಷ್ಮಿ, ಧನಲಕ್ಷ್ಮಿ, ವರಲಕ್ಷ್ಮಿ, ಮೋಕ್ಷಲಕ್ಷ್ಮಿ – ಎಂಬ ಬಗೆಬಗೆಯ ಹೆಸರುಗಳಿಂದ ಆಕೆಯು ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವಳೆಂದೂ ಪ್ರಸಿದ್ಧಿಯಷ್ಟೇ ; ಈ ಲಕ್ಷ್ಮಿಯು ಪರಮಾತ್ಮನಾದ ಮಹಾವಿಷ್ಣುವಿನ ಅಧೀನಳೇ, ಸರಿಯಾಗಿ ನೋಡಿದರೆ ಆ ಪರಮಾತ್ಮಸ್ವರೂಪಳೇ

ಹೊರತು, ಪರಮಾತ್ಮನಿಗಿಂತ ಬೇರೆಯಾದ ಯಾವದೊಂದರಲ್ಲಿಯೂ ಲಕ್ಷ್ಮಿಯಿರುವದಿಲ್ಲವೆಂಬ ತತ್ತ್ವವನ್ನು ಲಕ್ಷ್ಮೀನರಸಿಂಹನೆಂಬ ಹೆಸರು ಹೊರಗೆಡುವುತ್ತದೆ. ಈ ಅಭಿಪ್ರಾಯಗಳನ್ನೆಲ್ಲ ಮನಸ್ಸಿನಲ್ಲಿಟ್ಟು ಆಚಾರ್ಯರವರು ಮನಸ್ಸಿಗೆ ಉಪದೇಶವನ್ನು ಮಾಡುವ ನೆಪದಿಂದ '**ಲಕ್ಷ್ಮೀನರಸಿಂಹ**'ನೆಂಬ ಅಂಕಿತದಿಂದ ಈ ಪ್ರಕರಣವನ್ನು ಅಗ್ರಹಿಸಿರುತ್ತಾರೆ.

ನಮ್ಮ ಮನಸ್ಸೆಂಬುದು ಹೂವಿನ ರಸವನ್ನು ಹುಡುಕಿಕೊಂಡು ಹಾರಾಡುತ್ತಿರುವ ಜೇನುಹುಳುವಿನಂತೆ ಹರಿದಾಡುತ್ತಿರುವದು. ಹೂವಿನಲ್ಲಿ ರಸವಿರಲಿ ಇಲ್ಲದಿರಲಿ, ಅದರಮೇಲೆ ಕೂತುಕೊಂಡೇ ನೋಡುವ ಅವಿವೇಕಿಯಾದ ಭ್ರಮರದಂತೆ ಮನಸ್ಸು ಈ ಸಂಸಾರದಲ್ಲಿ ಒಂದಾಗುತ್ತಲೊಂದು ವಿಷಯದ ಮೇಲೆ ಕೂರುತ್ತಲಿರುವದು. ಆದ್ದರಿಂದ ಆಚಾರ್ಯರು ಹೀಗೆಂದು ಉಪದೇಶಮಾಡುತ್ತಾರೆ : ''ಎಲೈ ಚಿತ್ತವೆಂಬ ದುಂಬಿಯೆ, ನೀನು ಓಡಾಡುತ್ತಿರುವದು ಹೂದೋಟವಲ್ಲ, ಯಾವ ಗಿಡವೂ ಇಲ್ಲದ ಮರಳುಕಾಡು. ದೂರದೂರಕ್ಕೆ ನಿನಗೆ ಹೂಗಳಂತೆ ತೋರುವ ವಿಷಯಗಳು ನಿಜವಾದ ಹೂವಲ್ಲ, ಅವು ಈ ಮರಳುಕಾಡಿನಲ್ಲಿರುವ ಬಿಸಿಲುಕುದುರೆಯಲ್ಲಿ ಮಾರುಹೋಳೆದಿರುವ ನಿಜವಾದ ಒಂದು ಹಾವಿನ ನೆಳಲುಗಳು. ಇಲ್ಲಿ ಯಾವ ಹೂವೂ ನಿಜವಾಗಿ ಇಲ್ಲವೇ ಇಲ್ಲ. ಇನ್ನು ರಸವೆಲ್ಲಿ ಬಂತು ? ಆದ್ದರಿಂದ ಅಲ್ಲಿ ಸುಮ್ಮಸುಮ್ಮನೆ ಹಾರಾಡಿ ಆಯಾಸಪಡಬೇಡ. ನೀನು ಲಕ್ಷ್ಮೀನರಸಿಂಹನ ಪಾದಕಮಲದಲ್ಲಿರುವ ಮಕರಂದವನ್ನೇ ಸೇವಿಸು. ಅದೇ ನಿನ್ನ ಬಾಯಾರಿಕೆಯನ್ನು ಇಂಗಿಸಿ ಆಯಾಸವನ್ನು ಪರಿಹರಿಸಿ ಶಾಂತಿಯನ್ನು ಕೊಡುವ ನಿಜವಾದ ರಸವು.''

**ತ್ವತ್ಪ್ರಭುಜೀವಪ್ರಿಯಮಿಚ್ಛಸಿ ಚೇ–**
**ನ್ನರಹರಿಪೂಜಾಂ ಕುರು ಸತತಮ್ ।**
**ಪ್ರತಿಬಿಮ್ಬಾಲಙ್ಕೃತಿಧೃತಿಕುಶಲೋ**

॥೧॥

**ಭಾವಾರ್ಥ** : ನಿನ್ನೊಡೆಯನಾದ ಜೀವನಿಗೆ ಒಳ್ಳೆಯದಾಗ ಬೇಕೆಂದು ಬಯಸುವೆಯಾದರೆ ಬಿಡದೆ ನರಸಿಂಹಸ್ವಾಮಿಯ ಪೂಜೆಯನ್ನು

ಮಾಡು. ಏಕೆಂದರೆ ಪ್ರತಿಬಿಂಬಕ್ಕೆ ಅಲಂಕಾರಮಾಡಬೇಕೆಂಬ ಜಾಣನು ಬಿಂಬಕ್ಕೆ ಅಲಂಕಾರಮಾಡುತ್ತಾನೆ.

**ವಿವರ :–** ಈ ಶ್ಲೋಕದಲ್ಲಿ ಜೀವನ ಸ್ವರೂಪವನ್ನು ತಿಳಿಸಿಕೊಟ್ಟಿರುತ್ತದೆ. ನಮ್ಮೆಲ್ಲರಲ್ಲಿಯೂ ನಾನು–ನಾನೆಂಬ ರೂಪವನ್ನು ವಹಿಸಿಕೊಂಡು ಬಗೆಬಗೆಯ ಕರ್ಮವನ್ನು ಮಾಡುತ್ತಲೂ ಬಗೆಬಗೆಯ ಸುಖದುಃಖಗಳನ್ನು ಅನುಭವಿಸುತ್ತಲೂ ಇರುವ ಒಂದಾನೊಂದು ವಸ್ತುವು ಅನುಭವಕ್ಕೆ ಬರುವದು. ಇದೇ ಜೀವನು. ಆದರೆ ಇದು ಯಾವದೆಂದು ವಿಚಾರಮಾಡುವದಕ್ಕೆ ಹೊರಟರೆ ಮಾತ್ರ ಇದು ಹಿಡಿತಕ್ಕೆ ಸಿಕ್ಕುವದಿಲ್ಲ. ಏಕೆಂದರೆ 'ಹೋಗುತ್ತೇನೆ, ಬರುತ್ತೇನೆ, ಹಾರುತ್ತೇನೆ, ಕುಣಿಯುತ್ತೇನೆ, ಬಡವಾಗಿದ್ದೇನೆ, ದಪ್ಪನಾಗಿದ್ದೇನೆ, ಕರ್ರಗಿದ್ದೇನ, ಬೆಳ್ಳಗಿದ್ದೇನೆ, ಆರೋಗ್ಯವಾಗಿದ್ದೇನೆ, ಅನಾರೋಗ್ಯವಾಗಿದ್ದೇನೆ – ಎಂದು ಮುಂತಾಗಿ ನಾವು ಹೇಳುವಾಗ 'ನಾನು' ಎಂದರೆ ದೇಹವು ; 'ನೋಡುತ್ತೇನೆ, ಕೇಳುತ್ತೇನೆ, ಮುಟ್ಟುತ್ತೇನೆ, ಮೂಸುತ್ತೇನೆ'– ಎಂದು ಮುಂತಾಗಿ ಹೇಳುವಾಗ 'ನಾನು' ಎಂದರೆ ಇಂದ್ರಿಯಗಳು ; 'ತಿಳಿಯುತ್ತೇನೆ, ತಿಳಿಯೆನು, ಸಂಶಯಪಡುತ್ತೇನೆ, ನಿಶ್ಚಯಿಸುತ್ತೇನೆ'– ಎಂದು ಮುಂತಾಗಿ ಹೇಳುವಾಗ 'ನಾನು' ಎಂದರೆ ಮನಸ್ಸು. ಹೀಗೆ ನಾನು ಎಂಬ ವಸ್ತುವು ಒಂದೊಂದುಸಂದರ್ಭದಲ್ಲಿ ಒಂದೊಂದು ಬಗೆಯಾಗಿ ತೋರುತ್ತಿರುವದು. ಆದರೂ ಶರೀರ, ಇಂದ್ರಿಯ, ಮನಸ್ಸು – ಇವುಗಳನ್ನು ತಾನೆಂದು ತಿಳಿಯುತ್ತಾ ಅಭಿಮಾನಪಡುತ್ತಿರುವ ವಸ್ತುವನ್ನೇ ಜೀವನೆಂದು ಕರೆಯುತ್ತಾರೆ ; ಈ ಜೀವನು ತನ್ನ ಅಭಿಮಾನದಿಂದ ನಾನಾಕರ್ಮಗಳನ್ನು ಮಾಡಿ ಪುಣ್ಯಪಾಪಗಳ ಮೂಲಕ ಸುಖದುಃಖಗಳನ್ನು ಇಹದಲ್ಲಿಯೂ ಪಡೆಯುತ್ತಿರುವನೆಂದು ಕರ್ಮವಿಪಾಕವನ್ನು ಬಲ್ಲ ಶಾಸ್ತ್ರಜ್ಞರು ಹೇಳುವರು.

ಈ ಜೀವನೆಂಬ ವಸ್ತುವಿನ ಸ್ವರೂಪವನ್ನು ಕುರಿತು ಆಚಾರ್ಯರು ಇಲ್ಲಿ ಉಪದೇಶಮಾಡಿರುವದೇನಂದರೆ, ''ಎಲೈ ಮನಸ್ಸೆ, ನಿನಗೆ ಜೀವನೇ ಒಡೆಯ ನಷ್ಟೆ ; ಇವನು ಎಲ್ಲಾ ಬಗೆಯಿಂದಲೂ ಸ್ವತಂತ್ರನೆಂದೂ ತನ್ನ ಇಚ್ಛೆಯ ಪ್ರಕಾರ ತನಗೆ ಬೇಕಾದ ಕರ್ಮಗಳನ್ನು ಮಾಡಿ ಆಯಾ ಕರ್ಮದ ಫಲವನ್ನೂ ತಾನೇ ಪಡೆಯುವನೆಂದೂ ನೀನು ತಿಳಿಯುವೆಯಲ್ಲವೆ ? ಆದರೆ ನಿಜವು ಇದಲ್ಲ.

ಈ ಜೀವನೆಂಬುವನು ಪರತಂತ್ರನು. ಮನುಷ್ಯರ ಮನಸ್ಸಿನ ವ್ಯಾಪಾರಗಳಿಗೆಲ್ಲ ಸಾಕ್ಷಿಯಾಗಿ ಆ ವ್ಯಾಪಾರಗಳ ಅಂಟು ಒಂದಿಷ್ಟೂ ಇಲ್ಲದ ಪರಮೇಶ್ವರನೊಬ್ಬನುಂಟು. ಆತನ ಸನ್ನಿಧಿಯಿಂದಲೇ ಜೀವನು ತನ್ನ ಕರ್ಮಗಳಲ್ಲಿ ತೊಡಗುತ್ತಿರುವನು. ಆತನೇ ಶ್ರೀ ನರಸಿಂಹಸ್ವಾಮಿಯು. ಸರಿಯಾಗಿ ನೋಡಿದರೆ ಆ ಪರಮಾತ್ಮನು ಬಿಂಬದಂತೆ ಇರುವನು. ಈ ಜೀವನು ಪ್ರತಿಬಿಂಬದಂತೆ ಆತನ ಅಧೀನನಾಗಿರುವನು. ಒಬ್ಬ ಮನುಷ್ಯನು ಕನ್ನಡಿಯಲ್ಲಿ ತೋರುವ ತನ್ನ ಮುಖದ ಪ್ರತಿಬಿಂಬವನ್ನು ಕಂಡು ಅದಕ್ಕೆ ಯಾವದಾದರೂ ಅಲಂಕಾರವು ಸಾಲದೆಂದು ಕಂಡುಬಂದರೆ ಏನು ಮಾಡುತ್ತಾನೆ ? ಆತನು ಆ ಪ್ರತಿಬಿಂಬಕ್ಕೆ ಯಾವದೊಂದು ಅಲಂಕಾರವನ್ನೂ ಮಾಡುವದಕ್ಕೆ ಹೋಗುವದಿಲ್ಲ; ಬಿಂಬವಾಗಿರುವ ತನ್ನ ಮುಖಕ್ಕೇ ಬೇಕಾದ ಅಲಂಕಾರವನ್ನು ಮಾಡಿಕೊಳ್ಳುತ್ತಾನೆ ; ಅಲ್ಲವೆ ? ಇದರಂತೆ ನಿನ್ನೊಡೆಯನೆಂದು ಭಾವಿಸಿರುವ ಜೀವನಿಗೆ ಏನಾದರೂ ಒಂದು ಹಿತವಾಗಬೇಕೆಂದು ನಿನಗೆ ಇಚ್ಛೆಯಿದ್ದರೆ, ಕೂಡಲೆ ಅವನ ಬಿಂಬದಂತಿರುವ ಪರಮಾತ್ಮನ ಆರಾಧನೆಯನ್ನು ಮಾಡುವದಕ್ಕೆ ಹೊರಡು. ಈಗ ನೀನು ಗಳಿಗೆಗಳಿಗೆಗೂ ಮಾಡುತ್ತಿರುವ ವಿಷಯಸೇವೆಯಿಂದ ವಿಷಯಗಳ ಮಾಲಿನ್ಯವು ನಿನ್ನ ಮೂಲಕ ಜೀವನಿಗೂ ಹತ್ತಿಕೊಳ್ಳುವಂತಿರುವದು. ಆ ನರಸಿಂಹಸ್ವಾಮಿಯ ಪೂಜೆಯನ್ನು ಮಾಡಿದರೆ ಕನ್ನಡಿಯ ಸ್ಥಾನದಲ್ಲಿರುವ ನೀನು ಶುದ್ಧಿಯಾಗುತ್ತೀಯೆ, ಆಮೇಲೆ ನಿನ್ನಲ್ಲಿ ಹೊಳೆದಿರುವ ಪ್ರತಿಬಿಂಬದಂತಿರುವ ಜೀವನಿಗೂ ಹಿತವಾಗುತ್ತದೆ.''

ಶುಕ್ತೌ ರಜತಪ್ರತಿಭಾ ಜಾತಾ
ಕಟಕಾದ್ಯರ್ಥಸಮರ್ಥಾ ಚೇತ್ ।
ದುಃಖಮಯೀ ತೇ ಸಂಸೃತಿರೇಷಾ
ನಿರ್ವೃತಿದಾನೇ ನಿಪುಣಾ ಸ್ಯಾತ್ ॥೨॥

ಭಾವಾರ್ಥ : ಕಪ್ಪೆಯ ಚಿಪ್ಪಿನಲ್ಲಿ ಕಾಣುವ ಬೆಳ್ಳಿಯಂಥ ವಸ್ತುವು ಕಡಗವೇ ಮುಂತಾದದ್ದನ್ನು ಮಾಡಿಕೊಳ್ಳಬಲ್ಲದ್ದಾದರೆ ಈ ದುಃಖಮಯವಾದ ಸಂಸಾರವು ನಿನಗೆ ಸುಖವನ್ನು ಕೊಟ್ಟರೂ ಕೊಟ್ಟೀತು.

ಜೀವನಿಗೆ ಹಿತವಾಗಬೇಕಾದರೆ ಪರಮಾತ್ಮನ ಸೇವೆಯನ್ನೇಕೆ ಮಾಡಬೇಕು ? ಹೊರಗೆ ತೋರುವ ವಿಷಯಸಾಮಗ್ರಿಗಳನ್ನೇಕೆ ಕೂಡಿಹಾಕಬಾರದು?–ಎಂದರೆ ಅದಕ್ಕೆ ಈ ಶ್ಲೋಕದಲ್ಲಿ ಉತ್ತರವನ್ನು ಹೇಳಿರುತ್ತಾರೆ.

**ವಿವರ :–** ''ಎಲೈ ಮನಸ್ಸೆ, ಈ ಸಂಸಾರದಲ್ಲಿ ನಿನಗೆ ತೋರುವ ಶಬ್ದ, ಸ್ಪರ್ಶ, ರೂಪ, ರಸ, ಗಂಧ – ಎಂಬ ಐದು ಬಗೆಯ ವಿಷಯಗಳುಂಟು. ಅವುಗಳನ್ನು ಇಂದ್ರಿಯಗಳ ಮೂಲಕವಾಗಿ ತೆಗೆದುಕೊಂಡು ಸುಖಪಡಬೇಕೆಂದು ಹೊರಟು ನೀನು ಹೀಗೆ ಬಳಲುತ್ತಿರುವೆ. ಆದರೆ ನಿಜವಾಗಿ ನೋಡು, ಈ ವಿಷಯಗಳಲ್ಲಿ ಎಡೆಬಿಡದೆ ಮಾರ್ಪಾಡುಗಳು ಆಗುತ್ತಲೇ ಇರುವವು. ಇವುಗಳನ್ನು ಹೊಂದಿ ನಿನಗೆ ಸುಖವನ್ನು ತಂದುಕೊಡುವವೆಂದು ನೀನು ಭಾವಿಸಿರುವ ಇಂದ್ರಿಯಗಳೂ ಕ್ಷಣಕ್ಕೊಂದು ಮಾರ್ಪಾಡನ್ನು ಹೊಂದುತ್ತಿರುವವು, ಹೀಗೆ ಕ್ಷಣಕ್ಷಣಕ್ಕೂ ಮಾರ್ಪಾಡಾಗುತ್ತಿರುವ ಇಂದ್ರಿಯವಿಷಯಗಳ ಸಂಬಂಧದಿಂದ ನಿಶ್ಚಿತವಾದ ಸುಖವು ದೊರಕುವದೆಂದು ನೀನು ನಂಬಿದ್ದರೂ ಆಯಾ ವಿಷಯಗಳು ಸಿಕ್ಕುವದರೊಳಗಾಗಿ ಅವುಗಳಿಂದ ಸುಖವು ದೊರೆತೀತೆಂಬ ನಿನ್ನ ಅಭಿಪ್ರಾಯವೇ ಎಷ್ಟೋ ವೇಳೆಗಳಲ್ಲಿ ಬದಲಾಗಿಯೂಬಿಟ್ಟಿರುವದು ಅನುಭವದಲ್ಲಿದೆ. ಹೀಗೆ ಯಾವ ವಿಧದಿಂದ ನೋಡಿದರೂ ನಂಬಿಕೆಗೆ ಯೋಗ್ಯವಲ್ಲದ ಈ ಸಂಸಾರದ ಸುಖವನ್ನು ನೆಚ್ಚಿ ಮೋಸಹೋಗಬಹುದೆ ?

''ಇನ್ನೊಂದು ವಿಷಯ. ದೂರದಲ್ಲಿ ಒಂದು ಕಪ್ಪೆಯಚಿಪ್ಪು ಬಿದ್ದಿದ್ದರೆ ಅದು ಬೆಳ್ಳಿಯೆಂದು ಭ್ರಮಿಸಿ ಮನುಷ್ಯನು ಓಡಿಹೋಗಿ ನೋಡಲು ಅದು ನಿಜವಾಗಿ ಬೆಳ್ಳಿಯಲ್ಲವೆಂದೂ ಬರಿಯ ಕಪ್ಪೆಯಚಿಪ್ಪೇ ಎಂದೂ ತೋರುವದು ನಿನಗೆ ಗೊತ್ತೇ ಇದೆಯಷ್ಟೆ. ಆದರೆ ಒಬ್ಬ ಮನುಷ್ಯನು ದೂರದಿಂದಲೇ ಈ ಕಪ್ಪೆಯಚಿಪ್ಪಿನಲ್ಲಿ ತೋರುವ ಹೊಳಪಿಗೆ ಮರುಳಾಗಿ 'ಆಹಾ ! ಯಾವ ಆಯಾಸವೂ ಇಲ್ಲದೆ ಇಲ್ಲಿಷ್ಟು ಬೆಳ್ಳಿಯು ಸಿಕ್ಕಿತು ? ಇದನ್ನು ತೆಗೆದುಕೊಂಡು ಒಂದು ಕಡಗವನ್ನು ಮಾಡಿಸಿಕೊಳ್ಳುವೆನು'– ಎಂದು ಯೋಚಿಸಿಕೊಂಡರೆ ಅವನನ್ನು ಎಂಥ ಮೂಢನೆನ್ನಬೇಕು ! ಈ ಸಂಸಾರದಲ್ಲಿ ವಿಷಯಗಳಿಂದ ನಮಗೆ ಸುಖವಾಗುವದೆಂದೇ ಎಷ್ಟೋ ಸಲ ತೋರುವದು. ಆದರೆ ಅದು

ದುಃಖದಲ್ಲಿಯೇ ಕೊನೆಗಾಣುವದಾದ್ದರಿಂದ ಸಂಸಾರವು ನಿಜವಾಗಿ ದುಃಖಮಯವೇ ಆಗಿರುವದು. ಈ ನಿಜವನ್ನು ತಿಳಿಯಲಾರದೆ ಮತ್ತೆಮತ್ತೆ ಮೋಸಹೋಗುತ್ತಿರುವೆಯಲ್ಲ! 'ಆಗೇನೋ ತಿಳಿಯದೆ ಮೋಸಹೋದೆನು ; ಈಗ ನಿಜವಾಗಿಯೂ ಇದು ಬೆಳ್ಳಿಯೇ' ಎಂದು ಮತ್ತೆ ಕಪ್ಪೆಯಚಿಪ್ಪಿನ ಕಡೆಗೇ ಓಡುತ್ತಿರುವ ಹುಚ್ಚನಂತೆ, ಈ ಸಂಸಾರದಲ್ಲಿ ಈಗ ಸುಖವು ಸಿಕ್ಕುವದು, ಆಗ ಸುಖವು ಸಿಕ್ಕುವದು – ಎಂದು ಬಾಯಿನೀರುಕರೆಯುತ್ತಾ ಕಾದುಕೊಂಡಿರುವೆಯಲ್ಲ! ಈ ತೊಳಲನ್ನು ಇನ್ನುಮೇಲಾದರೂ ಬಿಟ್ಟು ಶ್ರೀಲಕ್ಷ್ಮೀನರಸಿಂಹನನ್ನು ಹೊಂದಿ ಸುಖವಾಗಿ ಬಾಳು.''

**ಆಕೃತಿಸಾಮ್ಯಾಚ್ಛಾಲ್ಮಲಿಕುಸುಮೇ**
**ಸ್ಥಲನಲಿನತ್ವಭ್ರಮಮಕರೋಃ ।**
**ಗನ್ಧರಸಾವಿಹ ಕಿಮು ವಿದ್ಯೇತೇ**
**ವಿಫಲಂ ಶ್ರಾಮ್ಯಸಿ ವಿರಸಾಯಾಮ್** ॥೩॥

**ಭಾವಾರ್ಥ :** ಒಂದೇ ಬಗೆಯ ಆಕಾರವಿರುವದರಿಂದ ಹೊಂಗೆಯ ಹೂವನ್ನೇ ನೆಲದ ಮೇಲೆ ಬೆಳೆಯುವ ನೈದಿಲೆಯೆಂದು ತಿಳಿದುಕೊಂಡು ಮೋಸಹೋಗಿರುತ್ತೀಯೆ. ಚೆನ್ನಾಗಿ ನೋಡು ; ಇದರಲ್ಲಿ ವಾಸನೆಯಾಗಲಿ ಮಕರಂದರಸವಾಗಲಿ ಇರುವದೇನು ? ಏನೇನೂ ರಸವಿಲ್ಲದ ಸಂಸಾರದಲ್ಲಿ ಸುಮ್ಮನೆ ಆಯಾಸಪಡುತ್ತಿರುವೆಯಲ್ಲ!

**ವಿವರ :–** ಪರಮಾತ್ಮನ ಆರಾಧನೆಯಿಂದಲೇ ನಮ್ಮ ಪುರುಷಾರ್ಥವಾಗುವದೆಂದು ಮೊದಲನೆಯ ಶ್ಲೋಕದಲ್ಲಿ ತಿಳಿಸಿದ್ದಾಯಿತು ; ವಿಷಯಗಳಲ್ಲಿ ಯಾವ ಸುಖವೂ ದೊರಕದ್ದರಿಂದ ಅವುಗಳನ್ನು ಕೈಬಿಟ್ಟುಬಿಡಬೇಕೆಂದು ಎರಡನೆಯ ಶ್ಲೋಕದಲ್ಲಿ ಹೇಳಿದ್ದಾಯಿತು. ಹಾಗಾದರೆ ಮನುಷ್ಯನು ಪರಮಾತ್ಮನ ಸೇವೆಯನ್ನು ಬಿಟ್ಟು ವಿಷಯಸೇವನಗೆ ಏತಕ್ಕೆ ಹಾತುವರಿಯುತ್ತಾನೆ ?– ಎಂಬ ಶಂಕೆಗ ಈಗ ಸಮಾಧಾನವನ್ನು ಹೇಳುತ್ತಾರೆ.

'ಎಲೈ ಚಿತ್ತವೆ, ನೀನು ಒಂದು ಹೂವನ್ನು ಮತ್ತೊಂದು ಹೂವೆಂದು ತಪ್ಪಾಗಿ ತಿಳಿದುಕೊಂಡ ದುಂಬಿಯಂತೆ ಮೋಸಹೋಗಿರುವೆ. ನೆಲದಮೇಲೆ ಬೆಳೆಯುವ

ಒಂದು ಬಗೆಯ ನೈದಿಲೆಯುಂಟು ; ಆ ಹೂವಿನಂತೆಯೇ ಹೊಂಗೆಯ ಹೂವೂ ಕಾಣುವದು. ಇವೆರಡಕ್ಕೂ ಆಕಾರವು ಒಂದೇ ಬಗೆಯಾಗಿದ್ದರೂ ಹೊಂಗೆಯ ಹೂವಿನಲ್ಲಿ ಆ ಹೂವಿನ ವಾಸನೆಯೂ ಇಲ್ಲ, ಆ ಹೂವಿನ ರಸವೂ ಇಲ್ಲ. ಆದರೂ ಜೇನುಹುಳುವು ವಾಸನೆಯೂ ರಸವೂ ಇರುವ ನೆಲದ ನೈದಿಲೆಯ ಹೂವೆಂಬ ಭ್ರಾಂತಿಯಿಂದ ಯಾವ ವಾಸನೆಯೂ ಯಾವ ರಸವೂ ಇಲ್ಲದ ಹೊಂಗೆಯ ಹೂವಿನಲ್ಲಿ ಬಂದು ಕೂರುವದುಂಟು.

ಇದರಂತೆ ವಿಷಯಗಳಲ್ಲಿ ನಿನ್ನನ್ನು ಎಳೆಯುವ ಸಾಮರ್ಥ್ಯವೆಂಬ ವಾಸನೆಯೂ ಅವುಗಳಲ್ಲಿ ನಿನಗೆ ಸುಖವನ್ನುಂಟುಮಾಡುವದೆಂಬ ಸವಿಯೂ ಉಂಟೆಂದು ನೀನು ತಿಳಿದಿದ್ದೀಯೆ. ಮತ್ತೆ ಮತ್ತೆ ಅವುಗಳನ್ನೇ ಸೇವಿಸಿ ಸೇವಿಸಿ, ನಮಗೆ ಈ ಭಾವನೆಯುಂಟಾಗಿಬಿಟ್ಟಿರುವದು. ಆದರೆ ಇಲ್ಲಿ ನಿಜವೇನು ? ಮನಸ್ಸು ಹೊಯ್ದಾಡುತ್ತಿರುವಾಗ ನಾವು ಕೋರುತ್ತಿದ್ದ ವಿಷಯವು ಏನಾದರೂ ಪುಣ್ಯವಶದಿಂದ ದೊರಕಿತೆಂದರೆ ಆ ಹೊಯ್ದಾಟವು ಕ್ಷಣಕಾಲ ನಿಲ್ಲುವದು. ಆಗ ಒಳಗೆ ಆತ್ಮನಲ್ಲಿ ಸ್ವಭಾವವಾಗಿದ್ದ ಆನಂದದ ಒಂದು ತುಂತುರು ಮನಸ್ಸಿನಲ್ಲಿ ಮಾರುಹೊಳೆಯಲು, ಆ ಸುಖದ ನೆರಳನ್ನೇ ನಾವು ವಿಷಯಸುಖವೆಂದು ತಿಳಿದು ಮರುಳಾಗುವೆವು.

ವಿಷಯಗಳಲ್ಲಿಯೇ ನಿಜವಾಗಿ ಮನುಷ್ಯರನ್ನೆಳೆಯುವ ಸಾಮರ್ಥ್ಯವಿದ್ದರೆ ಎಲ್ಲಾ ವಿಷಯಗಳೂ ಎಲ್ಲರನ್ನೂ ಏತಕ್ಕೆ ತಮ್ಮ ಕಡೆಗೆ ಜಗ್ಗುವದಿಲ್ಲ ? ವಿರಕ್ತರಾದವರನ್ನು ಯಾವ ವಿಷಯವೂ ಎಳೆಯಲಾರದಲ್ಲ, ಅದಕ್ಕೆ ಕಾರಣವೇನು ? ವಿಷಯಗಳಲ್ಲಿ ನಿಜವಾಗಿಯೂ ಸವಿಯಿದ್ದರೆ ಅವುಗಳು ಯಾವಾಗಲೂ ಸವಿಯನ್ನೇಕೆ ಮಾಡುವದಿಲ್ಲ ? ಹುಡುಗರಿಗೆ ಬೇಕಾಗಿದ್ದ ವಸ್ತುಗಳು ಅವರೇ ದೊಡ್ಡವರಾದಮೇಲೆ ಸಪ್ಪೆಯಾಗಿಬಿಡುವವಲ್ಲ, ಅದೇಕೆ ?

ಪರಮಾತ್ಮನ ವಿಷಯವು ಹಾಗಲ್ಲ. ಆತನು ನರಹರಿಯು, ಎಂದರೆ ಮನುಷ್ಯರನ್ನೆಲ್ಲ ತನ್ನ ಕಡೆಗೆ ಎಳೆದುಕೊಳ್ಳುವ ಸಾಮರ್ಥ್ಯವುಳ್ಳಾತನು. ಪರಮಾತ್ಮನನ್ನು ಬಿಟ್ಟುಹೋಗಬೇಕೆಂದು ಮನುಷ್ಯನು ಎಷ್ಟು ಪ್ರಯತ್ನಪಟ್ಟರೂ ಆಗುವ ಮಾತಲ್ಲ. ಪರಮಾತ್ಮನನ್ನು ಬಿಟ್ಟು ಹೋಗಬೇಕೆಂಬವರ ಯತ್ನವು ರೆಕ್ಕೆಗಳನ್ನು ಬಿಟ್ಟು ಹಾರಿಹೋಗುವೆವೆಂದು ಬಯಸುವ ಹಕ್ಕಿಗಳ ಯತ್ನದಂತೆ

ಆಗುವದು ಏಕೆಂದರೆ ಹಕ್ಕಿಗಳಿಗೆ ಹಾರುವ ಸಾಧನವೇ ರೆಕ್ಕೆಗಳಾಗಿರುವಂತೆ ಪರಮಾತ್ಮನು ಮನುಷ್ಯರೆಲ್ಲರ ತಿರುಳಾಗಿರುವನು. ಆತನ ಪಾದಕಮಲದ ರಸವನ್ನು ಪಾನಮಾಡಿದ ಮನಸ್ಸಿಗೆ ಮತ್ತೆ ಯಾವದೂ ಸವಿಯಾಗಿ ತೋರುವದಿಲ್ಲ. ಲೋಕದಲ್ಲಿರುವ ವಸ್ತುಗಳ ಸವಿಯೆಲ್ಲ ನಿಜವಾಗಿ ಈ ಸವಿಯೇ ; ಇದನ್ನರಿಯದೆಯೆ ನಾವು ಪರಮಾತ್ಮನನ್ನು ಬಿಟ್ಟು ಬೇರೆ ಸವಿಯೊಂದುಂಟೆಂದು ತಪ್ಪಾಗಿ ತಿಳಿಯುವೆವು. ದೊಡ್ಡದೊಡ್ಡ ಸಾಹುಕಾರರು, ರಾಜರು – ಮುಂತಾದವರು ಕೂಡ ತಮ್ಮ ಐಶ್ವರ್ಯವನ್ನು ಬಿಟ್ಟು ಯಾವ ಪರಮಾತ್ಮನ ಪಾದಾರವಿಂದವನ್ನು ಸೇರಬೇಕೆಂದು ತಪಸ್ಸು, ಧ್ಯಾನ– ಮುಂತಾದವುಗಳನ್ನು ಮಾಡುವದಕ್ಕೆ ಹೋಗುವರೋ, ಆ ಪಾದಾರವಿಂದದ ಮಕರಂದದ ಸವಿಯು ಎಷ್ಟು ಮಧುರವಾಗಿರುವದೆನ್ನಬೇಕು !''

ಸ್ರಕ್ಚನ್ದನವನಿತಾದೀನ್ ವಿಷಯಾನ್
ಸುಖದಾನ್ ಮತ್ವಾಽತ್ರ ವಿಹರಸೇ ।
ಗನ್ಧಫಲೀಸದೃಶಾ ನನು ತೇಽಮೀ
ಭೋಗಾನನ್ತರದುಃಖಕೃತಃ ಸ್ಯುಃ ||೪||

**ಭಾವಾರ್ಥ :** ಹೂ, ಗಂಧ, ಸ್ತ್ರೀ – ಮುಂತಾದ ವಿಷಯಗಳು ಸುಖವನ್ನು ಕೊಡುವವೆಂದಲ್ಲವೆ ಇಲ್ಲಿ ಅಡ್ಡಾಡುತ್ತಿರುವೆ? ಆದರೆ ಇವು ಸಂಪಿಗೆಯ ಮೊಗ್ಗಿನಂತೆ ಅನುಭವಿಸಿದಮೇಲೆ ದುಃಖವನ್ನುಂಟುಮಾಡುವವಲ್ಲ !

**ವಿವರ :–** ಸಂಸಾರವು ನೀರಸವೆಂದು ವಿಚಾರದಲ್ಲಿ ಎಷ್ಟು ಬಗೆಯಿಂದ ಕಂಡುಬಂದರೂ ಮತ್ತೆಮತ್ತೆ ಜನರು ಮನಸ್ಸನ್ನು ವಿಷಯಗಳ ಕಡೆಗೆ ಹರಿಯುವದನ್ನು ನಿಲ್ಲಿಸುವದಿಲ್ಲ. ವಿಷಯಗಳಲ್ಲಿ ಸುಖವನ್ನು ಕೊಡುವ ಸಾಮರ್ಥ್ಯವಿದೆಯೆಂಬ ಭ್ರಾಂತಿಯಿರುವವರೆಗೂ ಅವರಿಗೆ ಪರಮಾತ್ಮನ ಕಡೆಗೆ ತಿರುಗುವದು ಕಷ್ಟವಾಗಿರುವದು ; ಪರಮಾತ್ಮನ ಕಡೆಗೆ ತಿರುಗಿದ ಹೊರತು ನಿಜವಾದ ಸುಖದ ಸವಿಯು ತೋರುವದಿಲ್ಲ ; ನಿಜವಾದ ಸುಖವನ್ನು ಅನುಭವಕ್ಕೆ ತಂದುಕೊಂಡ ಹೊರತು ಸಂಸಾರದಲ್ಲಿ ತುಚ್ಛಬುದ್ಧಿಯು ಉಂಟಾಗುವದೇ ಇಲ್ಲ. ಆದ್ದರಿಂದ ಪರಮಾತ್ಮನ ಸೇವೆಯಿಂದ ಆಗುವ ಸುಖವನ್ನು ಕಾಣುವ ಮೊದಲೇ ವಿಷಯಗಳನ್ನು ಕಡೆಗಾಣುವದಕ್ಕೆ ಒಂದು ಉಪಾಯವು ಬೇಕಾಯಿತಷ್ಟೆ. ಆ ಉಪಾಯವನ್ನು ಈ ನಾಲ್ಕು ಐದನೆಯ ಶ್ಲೋಕಗಳಲ್ಲಿ ತಿಳಿಸಿರುತ್ತಾರೆ.

“ಎಲೈ ಮನಸ್ಸೆ, ಈ ಸಂಸಾರದಲ್ಲಿ ಕೆಲವು ವಿಷಯಗಳಿಂದ ದುಃಖವಾಗುವದೆಂಬುದು ಥಟ್ಟನೆ ಕಾಣುವದರಿಂದ ಅವುಗಳನ್ನೇನೋ ಬಿಟ್ಟುಬಿಡಬಹುದು ; ಹೂ, ಗಂಧ, ಸ್ತ್ರೀಭೋಗ – ಮುಂತಾದ ಕೆಲವು ವಿಷಯಗಳು ಸುಖವನ್ನೇ ಕೊಡುವವೆಂದು ತಿಳಿದಿರುವಾಗ ಅವುಗಳನ್ನು ಬಿಡುವದು ಹೇಗೆಂದು ಕೇಳುವೆಯೇನು ? ಇದಕ್ಕೊಂದುಪಾಯವನ್ನು ಹೇಳುವೆನು ಕೇಳು : ವಿಷಯಗಳು ಮೊದಲು ಸುಖವನ್ನು ಕೊಡುವಂತೆ ಕಂಡರೂ ಕೊನೆಗೆ ದುಃಖವನ್ನೇ ಕೊಡುವವು. ಅದು ಹೇಗೆಂದರೆ, ಹೂ, ಗಂಧ – ಮೊದಲಾದ ಸಾಮಗ್ರಿಗಳನ್ನು ಸಂಪಾದಿಸಿಕೊಳ್ಳುವದಕ್ಕೆ ಮೊದಲು ದುಃಖಪಡಬೇಕು. ಆಮೇಲೆ ಅವುಗಳನ್ನು ಕಾಪಾಡಿಕೊಳ್ಳುವದಕ್ಕೆ ದುಃಖಪಡಬೇಕು, ಆಮೇಲೆ ಅವು ಹೋದವಲ್ಲ! ಎಂದು ದುಃಖಪಡಬೇಕು. ಅವುಗಳು ಶರೀರದಮೇಲೆ ಮಾಡುವ ಪರಿಣಾಮದಿಂದ. ಎಂದರೆ ಅವುಗಳು ಕೊಳೆಯುವದರಿಂದ ಅಥವಾ ಬೇರೆ ಮಾರ್ಪಾಡನ್ನು ಹೊಂದಿ ಶರೀರದಲ್ಲಿ ಬೆವರಿನ ಮೂಲಕ ಸೇರಿಕೊಳ್ಳುವದರಿಂದ ಆಗುವ ಅಸಹ್ಯಪರಿಣಾಮದಿಂದ ದುಃಖಪಡಬೇಕು. ಹೀಗೆ ಮೊದಲಿಂದ ಕೊನೆಯವರೆಗೆ ನೋಡಿದರೂ ಇವುಗಳೆಲ್ಲವೂ ದುಃಖಮಯವಾಗಿರುವವು. ಭ್ರಾಂತಿಯಿಂದ ಮೊದಲು ಸುಖಮಯವಾಗಿ ತೋರಿದ್ದ ಅವುಗಳು ಉಪಭೋಗವಾದಮೇಲಂತೂ ದುಃಖವನ್ನು ತಪ್ಪದೆ ಕೊಡುವವು.

ದುಂಬಿಯು ಹೂಗಳೆಲ್ಲ ತನಗೆ ಮಕರಂದವನ್ನು ಕೊಡುವವೆಂದು ಸುಮ್ಮನೆ ಹಾರಾಡಿ ಹಾರಾಡಿ ಆಯಾಸಪಡುವದೇ ಅಲ್ಲದೆ, ವಾಸನೆಯ ಜೋರು ತೀರ ಬಲವಾಗಿರುವ ಸಂಪಿಗೆಯ ವನಕ್ಕೂ ನುಗ್ಗುವದುಂಟು. ಆಗ ಅದರ ವಾಸನೆಯನ್ನು ತಡೆಯಲಾರದೆ ಅಲ್ಲಿಯೇ ಸತ್ತುಹೋಗಿಬಿಡುವದು. ವಿಷಯಗಳೂ ನಿನ್ನ ಪಾಲಿಗೆ ಸಂಪಿಗೆಯ ಮೊಗ್ಗುಗಳಂತೆಯೇ. ಅವು ಮೊದಮೊದಲು ಸುಖದ ವಾಸನೆಯನ್ನು ನಿನ್ನ ಮೂಗಿನ ತುದಿಗೆ ತೋರಿಸಿದರೂ ಕೊನೆಗೆ ನಿನ್ನ ನಾಶಕ್ಕೇ ಕಾರಣವೆಂಬುದನ್ನು ಮರೆಯಬೇಡ. ‘ಈ ವಿಷಯಗಳನ್ನು ಧ್ಯಾನಮಾಡುತ್ತಿದ್ದರೆ, ಇವುಗಳಲ್ಲಿಯೇ ಆಸಕ್ತಿಯುಂಟಾಗುತ್ತದೆ ; ಆಸಕ್ತಿಯಿಂದ ಇವುಗಳಲ್ಲಿ ಆಸೆಯುಂಟಾಗುತ್ತದೆ, ಆಸೆಯು ನೆರವೇರದಿದ್ದರೆ ಸಿಟ್ಟುಂಟಾಗುತ್ತದೆ. ಸಿಟ್ಟಿನಿಂದ ಬುದ್ಧಿಮೋಹವಾಗುತ್ತದೆ, ಆಮೇಲೆ ನಾನೇ ಹಾಳಾಗುವೆನು’– ಎಂದು ವಿಷಯಗಳ ಸ್ವರೂಪದಲ್ಲಿರುವ ದೋಷವನ್ನೂ ಅವುಗಳ ಮೇಲಿರುವ ಆಸಕ್ತಿಯಿಂದಾಗುವ ದೋಷಗಳನ್ನೂ

ಅವುಗಳ ಉಪಭೋಗದಿಂದಾಗುವ ದುಃಖದೋಷಗಳನ್ನೂ ಎಣಿಸಿಕೊಳ್ಳುತ್ತಿದ್ದರೆ ಅವುಗಳಲ್ಲಿ ವಿರಕ್ತಿಯುಂಟಾಗುವದು. ಈ ಉಪಾಯದಿಂದ ವಿಷಯಗಳಿಂದ ಹಿಂದಕ್ಕೆ ಸರಿದು ಪರಮಾತ್ಮನ ಪಾದಾರವಿಂದವನ್ನು ಧ್ಯಾನಿಸುವದಕ್ಕೆ ಯತ್ನಮಾಡು.''

**ತವ ಹಿತಮೇಕಂ ವಚನಂ ವಕ್ಷ್ಯೇ**
**ಶೃಣು ಸುಖಕಾಮೋ ಯದಿ ಸತತಮ್ ।**
**ಸ್ವಪ್ನೇ ದೃಷ್ಟಂ ಸಕಲಂ ಹಿ ಮೃಷಾ**
**ಜಾಗ್ರತಿ ಚ ಸ್ಮರ ತದ್ವದಿತಿ** ||೫||

**ಭಾವಾರ್ಥ :** ನಿನಗೆ ಯಾವಾಗಲೂ ಸುಖವನ್ನೇ ಹೊಂದಬೇಕೆಂಬ ಆಸೆಯುಂಟೇನು ? ಹಾಗಾದರೆ ನಿನಗೊಂದು ಹಿತೋಪದೇಶವನ್ನು ಮಾಡುವೆನು, ಕೇಳು. ಕನಸಿನಲ್ಲಿ ಕಂಡದ್ದೆಲ್ಲವೂ ಸುಳ್ಳಷ್ಟೆ, ಎಚ್ಚರದಲ್ಲಿಯೂ ಹಾಗೆಯೇ ಸರಿಯೆಂದು ನೆನಪಿಗೆ ತಂದುಕೊಳ್ಳುತ್ತಿರು.

**ವಿವರ :–** ವಿಷಯಗಳಿಂದಾಗುವ ಸುಖವು ಕಷ್ಟದಿಂದ ದೊರಕತಕ್ಕದ್ದೆಂದೂ, ಅದು ಕ್ಷಣಮಾತ್ರವಿರುವದೆಂದೂ, ಉಪಭೋಗವಾದಮೇಲೆ ದುಃಖದಲ್ಲಿಯೇ ಕೊನೆಗಾಣತಕ್ಕದ್ದೆಂದೂ ಗೊತ್ತಿದ್ದರೂ ವಿಷಯಗಳು ನಮ್ಮೆದುರಿಗೆ ಬಂದಾಗ ಅವುಗಳಲ್ಲಿಯೇ ನಮ್ಮ ಮನಸ್ಸು ಎರಗುವದೇ ಹೊರತು ಹಿಂದಕ್ಕೆ ಸರಿಯುವಷ್ಟು ವಿವೇಕವು ನಮಗೆ ಆಗ್ಗೆ ಹೊಳೆಯುವದಿಲ್ಲ. ವಿಷಯಸುಖವು ಅನಿತ್ಯವಾದರೂ ಸಿಕ್ಕುವಷ್ಟು ಕಾಲವಾದರೂ ಅದು ಇರುವವೆಂದೂ ಆ ಸುಖಕ್ಕೆ ವಿಷಯಗಳೇ ಕಾರಣವೆಂದೂ ಜನರಿಗೆ ಮತ್ತೆ ಮತ್ತೆ ಭ್ರಾಂತಿಯುಂಟಾಗವದು. ಇದನ್ನು ತೊಲಗಿಸುವದಕ್ಕಾಗಿ ಇಲ್ಲಿ ಮತ್ತೊಂದು ವಿಚಾರವನ್ನು ಸಾಧಕನ ಲಕ್ಷ್ಯಕ್ಕೆ ತರುತ್ತಾರೆ.

''ಎಲೈ ಮನಸ್ಸೆ, ನಿನಗೆ ಸುಖವನ್ನು ಪಡೆಯಬೇಕೆಂಬ ಬಯಕೆಯಿದೆ. ಈ ಸುಖವು ಯಾವಾಗಲೂ ಇರಬೇಕು, ದುಃಖವು ಎಂದಿಗೂ ಬೇಡ – ಎಂಬ ಆಸೆಯೂ ಇದೆಯಲ್ಲವೆ ? ಹಾಗಾದರೆ ಸುಖಕ್ಕೆ ನಿಜವಾದ ಸಾಧನವು ಯಾವದು ?

ದುಃಖಕ್ಕೆ ಕಾರಣವು ಯಾವದು ? – ಎಂಬುದನ್ನು ನೀನ ವಿಂಗಡಿಸಿ ತಿಳಿದುಕೊಳ್ಳಬೇಕಾದದ್ದು ಅವಶ್ಯವಾಯಿತು.

''ಸುಖಕ್ಕೆ ಇವೇ ಸಾಮಗ್ರಿಗಳು ಎಂದು ನಾವು ಎಚ್ಚರದಲ್ಲಿ ಕೂಡಿ ಹಾಕುವಂತೆಯೇ ಕನಸಿನಲ್ಲಿಯೂ ಕೆಲವು ಸಾಮಗ್ರಿಗಳನ್ನು ಕೂಡಿಹಾಕುವದಕ್ಕೆ ಹೋಗುತ್ತೇವೆ. ಅಲ್ಲಿಯೂ ನಮಗೆ ಕೆಲವು ವಸ್ತುಗಳಿಂದ ಸುಖವಾಗುವದೆಂದೂ ಮತ್ತೆ ಕೆಲವು ವಸ್ತುಗಳಿಂದ ದುಃಖವಾಗುವದೆಂದೂ ವಿಂಗಡಿಸಿಕೊಂಡು, ದುಃಖಕಾರಣವಾದ ವಸ್ತುಗಳನ್ನು ತೊಲಗಿಸಿಕೊಳ್ಳುವದಕ್ಕೂ ಸುಖಕಾರಣವಾದ ವಸ್ತುಗಳನ್ನು ಪಡೆಯುವದಕ್ಕೂ ಯತ್ನಿಸುತ್ತೇವೆ. ಅಲ್ಲಿಯೂ ಸುಖವನ್ನೂ ದುಃಖವನ್ನೂ ಪಡೆಯುವದಕ್ಕೆ ಆಶ್ರಯವಾಗಿ ಇಲ್ಲಿಯಂತೆಯೇ ಒಂದು ಶರೀರವು ತೋರಿಕೊಳ್ಳುವದು, ಆ ಶರೀರದಲ್ಲಿಯೂ ಈ ಶರೀರದಲ್ಲಿರುವಷ್ಟೇ ನಮಗೆ ಅಭಿಮಾನವಿರುವದು. ಹೊರಗಿರುವ ವಿಷಯಗಳ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳ ಯೋಗ್ಯತೆಯನ್ನು ನಮಗೆ ತಿಳಿಸುವದಕ್ಕೆ ಸಾಧನವಾಗಿ ಇಲ್ಲಿರುವಂತೆ ಅಲ್ಲಿಯೂ ಕಣ್ಣು ಕಿವಿ – ಮುಂತಾದ ಇಂದ್ರಿಯಸ್ಥಾನಗಳಿರುವವು ; ಆ ವಸ್ತುಗಳಿಗಾಗಿ ಪ್ರಯತ್ನಮಾಡುವದಕ್ಕೆ ಕೈ ಕಾಲು ಮುಂತಾದ ಕರ್ಮೇಂದ್ರಿಯಗಳ ಆಶ್ರಯಗಳಾದ ಅವಯವಗಳೂ ಅಲ್ಲಿ ಇರುತ್ತವೆ. ಇದಲ್ಲದೆ ಅಲ್ಲಿಯೂ ಇಲ್ಲಿಯಂತೆ ಬಹುಕಾಲದಿಂದ ನಾವು ಸುಖದುಃಖವನ್ನು ಅನುಭವಿಸುತ್ತಾ ಬಂದಿರುವಂತೆಯೂ ಮುಂದೆ ಸುಖದುಃಖವನ್ನನುಭವಿಸುವದಕ್ಕೆ ಸಿದ್ಧರಾಗಿರುವಂತೆಯೂ ನಮ್ಮ ಮುಂದೆ ತೋರಿಕೊಳ್ಳುತ್ತಿರುವ ವಿಷಯಸಾಮಗ್ರಿಯಿರುವ ಪ್ರಪಂಚದಲ್ಲಿ ನಮ್ಮಂತೆಯೇ ಬೇರೆಯ ಜೀವರುಗಳೂ ಇರುವಂತೆಯೂ ಅವರಲ್ಲಿ ಕೆಲವರು ನಮ್ಮವರು, ಕೆಲವರು ನಮಗೆ ಆಗದವರು, ಮತ್ತೆ ಕೆಲವರು ಉದಾಸೀನರು – ಎಂದು ಮುಂತಾಗಿ ಇಲ್ಲಿ ಯಂತೆಯೇ ವಿಂಗಡವಾಗಿರುವಂತೆಯೂ ಆ ಕಾಲಕ್ಕೆ ನಿಶ್ಚಿತವಾದ ತಿಳಿವಳಿಕೆಯುಂಟಾಗಿರುವದು. ಹೀಗಿದ್ದರೂ ಕನಸಿನಲ್ಲಿ ಕಂಡ ಭೋಗಗಳೂ, ಭೋಗಸಾಮಗ್ರಿಗಳೂ, ಭೋಕ್ತೃಸ್ವರೂಪವೂ ಮಿಕ್ಕ ಜೀವರಾಶಿಯೂ ಎಲ್ಲವೂ ಮಿಥ್ಯೆಯೇ, ಬರಿಯ ತೋರಿಕೆಯೇ – ಎಂದು ನಮ್ಮೆಲ್ಲರಿಗೂ ನಿಶ್ಚಿತವಾಗಿರುವ ದಲ್ಲವೆ ? ಇದರಂತೆಯೇ ಎಚ್ಚರದಲ್ಲಿಯೂ ನಾವು ಕಾಣುವದೆಲ್ಲವೂ ಮಿಥ್ಯೆಯೇ ಎಂಬುದನ್ನು ನೆನಪಿಗೆ ತಂದುಕೊಳ್ಳುತ್ತಿರು.

“ಎಚ್ಚರದಲ್ಲಿರುವದು ಮಿಥ್ಯೆಯೆಂಬುದಕ್ಕೆ ಅಡ್ಡಲಾಗಿ ಏನೇನು ನಿನಗೆ ತೋರಿದರೂ ಆಗ ಈ ಪ್ರಶ್ನೆಯನ್ನು ನಿನಗೆ ನೀನೇ ಹಾಕಿಕೊ ! ಕನಸಿನಲ್ಲಿಯೂ ತೋರಿದ್ದೆಲ್ಲವೂ ಆ ಕಾಲಕ್ಕೆ ಇಲ್ಲಿಯ ಹಾಗೆ ನಿಜವೆಂದೇ ತೋರಿತಲ್ಲವೆ ? ಆಗ್ಗೆ ಅದು ಮಿಥ್ಯೆಯೆಂದೇನೂ ನನಗೆ ತೋರಲಿಲ್ಲವಷ್ಟೆ ? ಇನ್ನು ಮುಂದೆ ನನಗೆ ಕನಸಾದರೂ ‘ಇದು ಕನಸೇ, ಮಿಥ್ಯೆಯೇ’ – ಎಂದು ಕನಸಿನ ಕಾಲಕ್ಕೆ ಗುರುತುಹಿಡಿದು ನಡೆದುಕೊಳ್ಳುವದಕ್ಕೂ ಆಗುವಹಾಗಿಲ್ಲವಲ್ಲ! ಹೀಗಿರುವಲ್ಲಿ ಕನಸಿಗೂ ಈ ಎಚ್ಚರಕ್ಕೂ ಏನು ಭೇದವಾಯಿತು ? ಕನಸ್ಸನ್ನು ಕೂಡ ನಾನು ಆಗ್ಗೆ ಎಚ್ಚರವೆಂದೇ ತಿಳಿದುಕೊಂಡಿದ್ದೆನಲ್ಲ ! ಇದೂ ಕನಸೇ, ಅಲ್ಲವೆಂಬುದಕ್ಕೇನು ಪ್ರಮಾಣವಿರುವದು ?”

“ಹೀಗೆ ಎಚ್ಚರದಲ್ಲಿ ಕಾಣುವದೆಲ್ಲ ಕನಸಿನಂತೆಯೇ ಮಿಥ್ಯೆಯೆಂದು ತಿಳಿದುಕೊಂಡರೆ ನಿನಗೆ ಆಗುವ ಪರಮಪ್ರಯೋಜನವೇನೆನ್ನುವೆಯೊ ? ಕನಸಿನಲ್ಲಿ ಕಾಣುವ ಪ್ರಪಂಚದಂತೆಯೇ ಎಚ್ಚರದಲ್ಲಿ ಕಾಣುವ ಪ್ರಪಂಚವೂ ಮಿಥ್ಯೆಯಾದ್ದರಿಂದ ಇದು ಬರಿಯ ಮರುಭೂಮಿಯಂತೆ ಇರುವದು, ಇದರಲ್ಲಿ ಸುಖರಸವನ್ನು ಕೊಡುವ ಹೂವಿನ ಗಿಡವೊಂದೂ ಇರಲಾರದು. ಇವೆರಡನ್ನೂ ನೋಡುತ್ತಿರುವ ಸಾಕ್ಷಿಚೈತನ್ಯವು ನಿತ್ಯವೇ, ಇದೇ ಶ್ರೀಲಕ್ಷ್ಮೀನರಸಿಂಹನು. ಈ ನರಸಿಂಹನಲ್ಲಿರುವ ಲಕ್ಷ್ಮಿಯೇ ನಾವು ಎಚ್ಚರದಲ್ಲಿಯೂ ಕನಸಿನಲ್ಲಿಯೂ ಕಾಣುವ ವಿಷಯಗಳಲ್ಲಿ ಮಾರುಹೋಳೆಯುತ್ತಾ ಸುಖದ ತೋರಿಕೆಯನ್ನು ಉಂಟುಮಾಡುತ್ತಿರುವವಳು. ಆದ್ದರಿಂದ ಈ ಶ್ರೀಲಕ್ಷ್ಮೀನರಸಿಂಹನೇ ಪ್ರಪಂಚದಲ್ಲಿ ತೋರುವ ಸಕಲಸುಖಕ್ಕೂ ಕಾರಣನು’ ಎಂದು ನಂಬಿಕೊಂಡು ಲಕ್ಷ್ಮೀನರಸಿಂಹನ ಭಜನೆಯನ್ನು ಮಾಡುತ್ತಿರು.”

॥ ಶ್ರೀ ॥

# ಲಕ್ಷ್ಮೀನೃಸಿಂಹಕರಾವಲಂಬನಸ್ತೋತ್ರಮ್

**ಶ್ರೀಮತ್ಪಯೋನಿಧಿನಿಕೇತನ ಚಕ್ರಪಾಣೇ**
**ಭೋಗೀಂದ್ರಭೋಗಮಣಿರಂಜಿತಪುಣ್ಯಮೂರ್ತೇ ।**
**ಯೋಗೀಶ ಶಾಶ್ವತ ಶರಣ್ಯ ಭವಾಬ್ಧಿಪೋತ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥ ೧ ॥**

**ಭಾವಾರ್ಥ :** ಸಂಪದ್ಯುಕ್ತವಾದ ಕ್ಷೀರಸಮುದ್ರವನ್ನು ಮನೆಯಾಗಿ ಉಳ್ಳವನೆ, ಚಕ್ರಧಾರಿಯೆ, ನಾಗಶ್ರೇಷ್ಠನಾದ (ಅನಂತನ) ಶರೀರದಲ್ಲಿರುವ (ರತ್ನ) ಮಣಿಯಿಂದ ವಿರಾಜಮಾನನಾದವನೆ, ಪುಣ್ಯಮೂರ್ತಿಯೆ, ಯೋಗೀಶ್ವರನೆ, ಶಾಶ್ವತನೆ, ( (ಭಕ್ತ ಜನ) ರಿಗೆ ಆಶ್ರಯನೆ, ಸಂಸಾರ ವೆಂಬ ಸಾಗರವನ್ನು ದಾಟಿಸುವ ಹಡಗಿನಂತೆ ಇರುವವನೆ, ಲಕ್ಷ್ಮೀದೇವಿ ಸಹಿತನಾದ ನರಸಿಂಹನೆ, ನನಗೆ ನಿನ್ನ ಕೈಗಳ ಆಸರೆಯನ್ನು ಕೊಡು !

**ವಿವರಣೆ :**—ಈ ಸ್ತೋತ್ರವು ಶ್ರೀ ಶಂಕರಭಗವತ್ಪಾದರು ರಚಿಸಿದ್ದೆಂದು ಪ್ರಸಿದ್ಧವಾಗಿದೆ. ಮಾಧವೀಯಶಂಕರವಿಜಯದ ಕಥೆಯಂತೆ ಆಚಾರ್ಯರು ಸರಸ್ವತೀದೇವಿಯು ಕೇಳಿದ್ದ ಕಾಮಶಾಸ್ತ್ರವಿಷಯಕವಾದ ಪ್ರಶ್ನೆಗಳಿಗೆ ಉತ್ತರ ಗಳನ್ನು ತಿಳಿಯುವ ಸಲುವಾಗಿ ಅಮರುಕರಾಜನ ಶರೀರವನ್ನು ಪ್ರವೇಶಿಸಿದ್ದಾಗ, ಪದ್ಮಪಾದಾದಿಶಿಷ್ಯರು ಅವಧಿಯು ಮುಗಿದಮೇಲೂ ಹಿಂತಿರುಗದೇ ಇರುವ ಗುರುಗಳನ್ನು ಕಂಡು 'ತತ್ತ್ವಮಸಿ ತತ್ತ್ವಮ್' ಎಂದು ಸ್ತೋತ್ರಮಾಡಿದಾಗ ಆಚಾರ್ಯರು ತಮ್ಮ ಸ್ವಶರೀರಕ್ಕೆ ಸೇರಲು ಹೊರಟರು. ಆ ವೇಳೆಗೆ ಗುಹೆಯಲ್ಲಿ ಬಿಟ್ಟುಹೋಗಿದ್ದ ಅವರ ಶರೀರವನ್ನು ರಾಜಾಜ್ಞೆಯಂತೆ ರಾಜಭಟರು ಚಿತೆಯ ಮೇಲಿರಿಸಿ ಬೆಂಕಿಯನ್ನು ಹೊತ್ತಿಸಿಬಿಟ್ಟಿದ್ದರು. ಆಗ ಅದನ್ನು ಕಂಡ ಆಚಾರ್ಯರು ಈ ಕರಾವಲಂಬನಸ್ತೋತ್ರದಿಂದ ಲಕ್ಷ್ಮೀನೃಸಿಂಹದೇವರನ್ನು ಸ್ತುತಿಸಲಾಗಿ

ಬೆಂಕಿಯು ಆರಿ ತಣ್ಣಗಾಗಿಬಿಟ್ಟಿತು. ಅನಂತರ ಆಚಾರ್ಯರು ತಮ್ಮ ಶರೀರವನ್ನು ಪ್ರವೇಶಿಸಿ ಶಿಷ್ಯರನ್ನು ಸಂತೋಷಗೊಳಿಸಿದರು– ಎಂಬುದಾಗಿ ತಿಳಿಯಬರುತ್ತದೆ. ಭಕ್ತಿರಸಪ್ರಧಾನವಾಗಿದ್ದು ಭಗವಂತನ ಶರಣಾಗತಿಯು ಮೋಕ್ಷಕ್ಕೆ ಸಾಧನವೆಂಬ ತತ್ತ್ವವನ್ನು ಹೊರಪಡಿಸುವ ಈ ಸ್ತೋತ್ರವು ಭಗವದ್ಭಕ್ತರಿಗೆಲ್ಲ ಪ್ರಿಯವಾಗಿರುವದರಲ್ಲಿ ಸಂಶಯವಿಲ್ಲ. ಈ ಸ್ತೋತ್ರದಲ್ಲಿ ಸಂಸಾರವನ್ನು ಕಾಡುಗಿಚ್ಚು, ಸಮುದ್ರ, ಮರ, ಹಾವು, ಮದ್ದಾನೆ (ಕಾಡಾನೆ)ಗಳಿಗೆ ಹೋಲಿಸಿ ಇಂಥ ಸಂಸಾರದಲ್ಲಿ ಬಹಳವಾಗಿ ಬಳಲಿರುವದಾಗಿಯೂ ಭಗವಂತನು ತನ್ನ ಕೈಗಳನ್ನು ಚಾಚಿ ಆಶ್ರಯವನ್ನು ಕೊಟ್ಟು ಉದ್ಧರಿಸಬೇಕೆಂದೂ ಭಕ್ತನು ಆರ್ತನಾಗಿ ದೈನ್ಯದಿಂದ ಕೇಳಿಕೊಂಡಿರುತ್ತಾನೆ.

ಭಗವದ್ಗೀತೆಯಲ್ಲಿ **'ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರ ಸಾಗರಾತ್'** (ಗೀ. ೧೨–೭) ಎಂದು ಭಗವಂತನು ಹೇಳಿರುವಂತೆ ಯಾರು ಭಗವಂತನನ್ನೇ ಅನನ್ಯಶರಣರಾಗಿ ಉಪಾಸನೆಮಾಡುವರೋ ಅವರನ್ನು ಆತನು ಈ ಮೃತ್ಯುಸಂಸಾರಸಾಗರದಿಂದ ಮೇಲಕ್ಕೆತ್ತಿ ಉದ್ಧರಿಸುವನು. ಭಗವಂತನನ್ನು ಹೊರತು ಬೇರೆ ಯಾರೂ ಹೀಗೆ ಉದ್ಧಾರಮಾಡುವವರಿಲ್ಲ. ಏಕೆಂದರೆ ಚತುರ್ಮುಖಬ್ರಹ್ಮನಿಂದ ಹಿಡಿದು ಉಳಿದ ಎಲ್ಲರೂ ಸಂಸಾರಿಗಳೇ ಆಗಿರುತ್ತಾರೆ. ಆದ್ದರಿಂದ ಕರಾವಲಂಬನಕ್ಕೆ ತಕ್ಕವನು ನರಶ್ರೇಷ್ಠನಾದ ನರಸಿಂಹನೊಬ್ಬನೇ – ಎಂದರಿಯಬೇಕು. ಮತ್ತು ಮೋಕ್ಷವೆಂಬ ಲಕ್ಷ್ಮಿಯು ನರಸಿಂಹನ ಅಧೀನಳಾಗಿರುತ್ತಾಳೆ. ಅವನ ಅನುಗ್ರಹದಿಂದಲೇ ಜೀವರುಗಳಿಗೆ ಮೋಕ್ಷಪ್ರಾಪ್ತಿಯಾಗುವದು. ಅಂತೂ ಲಕ್ಷ್ಮೀನರಸಿಂಹನು ಸಕಲರನ್ನೂ ಉದ್ಧರಿಸುವ ಪ್ರಭುವಾಗಿರುತ್ತಾನೆ.

ಈಗ ಶ್ಲೋಕದಲ್ಲಿರುವ ವಿಶೇಷಣಗಳನ್ನು ವಿಚಾರಮಾಡೋಣ. ಕ್ಷೀರಸಮುದ್ರವೇ ಭಗವಂತನ ವಾಸಸ್ಥಾನವಾಗಿದೆಯೆಂಬುದು ಹಾಲಿನಂತೆ ಶುದ್ಧ ಸತ್ತ್ವಗುಣವುಳ್ಳವರ ಹೃದಯದಲ್ಲಿ ಭಗವಂತನು ವಾಸಿಸುವನೆಂಬುದನ್ನು ಸೂಚಿಸುತ್ತದೆ – ಎಂದರೆ ಪರಮಾತ್ಮನು ಸರ್ವಭೂತಗಳಲ್ಲಿಯೂ ಇದ್ದುಕೊಂಡಿರುವನಾದರೂ ಭಕ್ತರ ಹೃದಯವು ಅವನ ದರ್ಶನಕ್ಕೆ ಯೋಗ್ಯವಾದ ಜಾಗವೆಂದಾಯಿತು. ಇನ್ನು ಚಕ್ರಪಾಣಿಯಾದ ಭಗವಂತನು ಚಂಚಲವಾದ ಮನಸ್ಸನ್ನು ತನ್ನ ಹಿಡಿತದಲ್ಲಿಟ್ಟಿರುವನೆಂದು ಸೂಚಿಸುವದು. ಆದಿಶೇಷನ

ಬಿಳುಪಾದ ಶರೀರದಲ್ಲಿ ಮಲಗಿರುವ ಆತನು ನಾಗಮಣಿಯಿಂದ ಅಲಂಕೃತನಾಗಿರುತ್ತಾನೆ. ಇದು ಭಗವಂತನು ಅಹಂಕಾರವನ್ನು ಮೆಟ್ಟಿ ಅದಕ್ಕಿಂತಲೂ ಹೆಚ್ಚಿನ ಸ್ಥಿತಿಯಲ್ಲಿದ್ದುಕೊಂಡು ಜ್ಞಾನವೆಂಬ ರತ್ನದಿಂದ ಭೂಷಿತನಾಗಿದ್ದಾನೆಂದು ತಿಳಿಸುವದು. ಇಂಥ ಪುಣ್ಯಶರೀರನೂ ಯೋಗಿಗಳ ಒಡೆಯನೂ ಶಾಶ್ವತನೂ ಸಂಸಾರವೆಂಬ ದೊಡ್ಡ ಸಮುದ್ರದಲ್ಲಿ ತೆಪ್ಪದಂತೆ ಇರುವವನೂ ಆದ ಭಗವಂತನು ಜೀವರುಗಳಿಗೆಲ್ಲ ಆಶ್ರಯನು. ಸಂಸಾರಸಮುದ್ರವು ಅಗಾಧವಾದದ್ದಾದರೂ ಭಗವಂತನೇ ಅದರ ದಡವು. ಅವನ ಪಾದಕಮಲಗಳೇ ತೆಪ್ಪವು. ಇಂಥ ತೆಪ್ಪ (ಹರಿಗೋಲು)ವೂ ಅಂಬಿಗನೂ ದೊರೆತಾಗ ಸಂಸಾರಕ್ಕಾಗಿ ಹೆದರಬೇಕಾಗಿಲ್ಲ. ಏಕೆಂದರೆ ದಾಟಿಸುವ ಅಂಬಿಗನೇ ಭಗವಂತನು. ಪುರಂದರದಾಸರು ಹಾಡಿರುವಂತೆ 'ಅಂಬಿಗ ನಾ ನಿನ್ನ ನಂಬಿದೇ ಜಗದಂಬಾ ರಮಣನಾ ನಂಬಿದೆ' ಎಂದು ಆತನನ್ನು ಭಜಿಸಿದರಾಯಿತು. ಆಗ ಆತನೇ ತನ್ನ ಕೈಗಳನ್ನು ಕೆಳಕ್ಕೆ ಚಾಚಿ ಸಂಸಾರದಲ್ಲಿ ಬಿದ್ದಿರುವ ಭಕ್ತರನ್ನು ಮೇಲೆತ್ತಿ ಉದ್ಧಾರಮಾಡುವನು.

**ಬ್ರಹ್ಮೇಂದ್ರರುದ್ರಮರುದರ್ಕಕಿರೀಟಕೋಟಿ–**
**ಸಂಘಟ್ಟಿತಾಂಘ್ರಿಕಮಲಾಮಲಕಾಂತಿಕಾಂತ ।**
**ಲಕ್ಷ್ಮೀಲಸತ್ಕುಚಸರೋರುಹರಾಜಹಂಸ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥ ೨ ॥**

**ಭಾವಾರ್ಥ** : ಬ್ರಹ್ಮ ಇಂದ್ರ ಮಹಾದೇವ – ಮುಂತಾದ ದೇವತೆಗಳ ಶಿರಸ್ಸಿನಲ್ಲಿರುವ, ಸೂರ್ಯನ ಕಾಂತಿಗೆ ಸಮಾನವಾದ ಪ್ರಕಾಶವುಳ್ಳ (ರತ್ನಖಚಿತ) ಕಿರೀಟಗಳು ಒಂದಕ್ಕೊಂದು ತಗಲುವ ಸೌಭಾಗ್ಯದಿಂದ ಕೂಡಿದ ಪಾದಕಮಲಗಳ ಕಾಂತಿಯಿಂದ ಬೆಳಗುತ್ತಿರುವವನೆ, ಲಕ್ಷ್ಮೀದೇವಿಯ ಸುಂದರವಾದ ಸ್ತನಗಳ ಸರೋವರದಲ್ಲಿ ವಿಹರಿಸುವ ರಾಜಹಂಸನೆ, ಲಕ್ಷ್ಮೀನರಸಿಂಹನೆ, ನನಗೆ ಕರಾವಲಂಬನವನ್ನು ಕೊಡು !

**ವಿವರಣೆ :** ಭಗವಂತನು ಸಕಲದೇವತೆಗಳಿಗೂ ಒಡೆಯನಾದ್ದರಿಂದ ಎಲ್ಲಾ ದೇವತೆಗಳೂ ಅವನಿಗೇ ನಮಸ್ಕರಿಸುವರು. ಹೀಗೆ ನಮಸ್ಕರಿಸಲು ಗುಂಪುಗುಂಪಾಗಿ ಬಂದ ದೇವತೆಗಳು ಒಟ್ಟಿಗೆ ಆತನ ಪಾದಗಳ ಕಡೆಗೆ ತಲೆಬಾಗಿಸಿದಾಗ ಅವರುಗಳು ತಮ್ಮತಮ್ಮ ತಲೆಗಳಲ್ಲಿ ಧರಿಸಿರುವ ರತ್ನಖಚಿತ ಕಿರೀಟಗಳು ಒಂದಕ್ಕೊಂದು ತಗಲುವವು. ಆಗ ಉಂಟಾದ ಕಾಂತಿಯು ಭಗವಂತನ ಶರೀರವನ್ನು ವ್ಯಾಪಿಸಿ ಆತನ ಶೋಭೆಯನ್ನು ಮತ್ತಷ್ಟು ಹೆಚ್ಚಿಸುವವು. ಹೀಗೆ ಸಕಲದೇವತೆಗಳಿಂದಲೂ ವಂದ್ಯನಾದ ಲಕ್ಷ್ಮೀನರಸಿಂಹನನ್ನು ಭಕ್ತನು ಇಲ್ಲಿ ಸ್ತುತಿಸುತ್ತಿದ್ದಾನೆ.

ಈತನು ತನ್ನ ತೊಡೆಯಮೇಲೆಯೇ ಧರಿಸಿರುವ ಜಗನ್ಮಾತೆಯಾದ ಮಹಾಲಕ್ಷ್ಮೀಯ ನೆಚ್ಚಿನ ಪತಿಯು. ಆಕೆಯ ಲೋಕೋತ್ತರವಾದ ಸೌಂದರ್ಯವು ವರ್ಣಿಸಲು ಅಶಕ್ಯವಾದದ್ದು. ಮಹಾಲಕ್ಷ್ಮೀಯು ಕ್ಷೀರಸಮುದ್ರದಿಂದ ಅವತರಿಸಿದಾಗ ಆಕೆಯು ತನಗೆ ಯೋಗ್ಯನಾದ ಪತಿಯನ್ನು ವರಿಸುವಾಗ ಎಲ್ಲಾ ದೇವತೆಗಳನ್ನೂ ಪರೀಕ್ಷಿಸಿದಳು. ಸುಂದರರೂಪ, ಸಾತ್ತ್ವಿಕಾದಿಗುಣಗಳು, ಐಶ್ವರ್ಯ, ಪರಿಪೂರ್ಣಜ್ಞಾನ, ಕ್ಷಮಾದಿಶೀಲಗಳು, ಪ್ರಭುತ್ವ, ಯೌವನಾದಿಗಳು ಯಾರೊಬ್ಬರಲ್ಲಿಯೂ ಒಂದುಗೂಡಿರಲಿಲ್ಲ. ಕಡೆಗೆ ಆಕೆಯ ತಪಃಫಲವೋ – ಎಂಬಂತೆ ಸಕಲಕಲ್ಯಾಣಗುಣಪರಿಪೂರ್ಣನಾದ ಶ್ರೀಮನ್ನಾರಾಯಣನೇ ಪತಿಯಾಗಿ ದೊರಕಿದನು. ಇಂಥ ಪತ್ನಿಯನ್ನು ಪಡೆದ ಶ್ರೀಮನ್ನಾರಾಯಣನ ಪ್ರತಿಷ್ಠೆಯೂ ಗೌರವವೂ ಇನ್ನೂ ಹೆಚ್ಚಾಯಿತು. ಹೀಗೆ ಸಕಲವಿಧದಿಂದಲೂ ತನಗೆ ಸಮಾನಳಾದ ತನ್ನ ಪತ್ನಿಯಾದ ಲಕ್ಷ್ಮೀಯ ವಿರಾಜಮಾನವಾದ ಸ್ತನಗಳೆಂಬ ಸರೋವರದಲ್ಲಿ ಈಜಾಡುತ್ತಿರುವ ರಾಜಹಂಸನು ಭಗವಂತನು ಎಂದು ಸ್ತುತಿಸಿದೆ. ಇದರಿಂದ ಭಗವಂತನ ಅನುರೂಪದಾಂಪತ್ಯವೂ ನಾರಾಯಣನನ್ನು ಸ್ತುತಿಸುವವರಿಗೆ ಲಕ್ಷ್ಮೀಯೂ ಅನುಗ್ರಹಮಾಡುವಳೆಂಬುದೂ ಸಿದ್ಧವಾಯಿತು.

**ಸಂಸಾರಘೋರಗಹನೇ ಚರತೋ ಮುರಾರೇ**
**ಮಾರೋಗ್ರಭೀಕರಮೃಗಪ್ರವರಾರ್ದಿತಸ್ಯ ।**
**ಆರ್ತಸ್ಯ ಮತ್ಸರನಿದಾಘನಿಪೀಡಿತಸ್ಯ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥ ೩ ॥**

**ಭಾವಾರ್ಥ :** ಎಲೈ ಮುರಾರಿಯೆ, ಸಂಸಾರವೆಂಬ ಭೀಕರವಾದ ಕಾಡಿನಲ್ಲಿ ಸಂಚರಿಸುತ್ತಿರುವ, ಕ್ರೂರವೂ ಅಂಜಿಕೆಯನ್ನುಂಟುಮಾಡುವದೂ ಆದ ಕಾಮವೆಂಬ ದೊಡ್ಡ ಮೃಗದಿಂದ ಹೊಡೆಯಲ್ಪಟ್ಟ, ಹೊಟ್ಟೆಯಕಿಚ್ಚೆಂಬ ಬಿಸಿಲಿನ ತಾಪದಿಂದ ಬಳಲಿ ಆರ್ತನಾಗಿರುವ ನನಗೆ ಎಲೈ ಲಕ್ಷ್ಮೀನೃಸಿಂಹನೆ, ಕರಾವಲಂಬನವನ್ನು ಕೊಡು.

**ವಿವರಣೆ :** ಸಂಸಾರಕ್ಕೆ ಮೂಲಕಾರಣವು ಅವಿದ್ಯೆಯೆಂಬುದೇ ನಿಜವಾದರೂ ಅವಿದ್ಯೆಯಿಂದುಂಟಾದ ಕಾಮವು ಹೆಚ್ಚು ಅನರ್ಥಕಾರಿಯೆಂದು ವಿವೇಕಿಗಳು ತಿಳಿಯುತ್ತಾರೆ. ಮನುಷ್ಯನು ಮಾಡುವ ಎಲ್ಲಾ ಕರ್ಮಗಳಿಗೂ ಕಾಮವೇ ಪ್ರೇರಕವು. ಭಗವಂತನೂ ಕೂಡ ಕಾಮವೇ ಮನುಷ್ಯನ ದೊಡ್ಡ ವೈರಿಯೆಂದಿರುತ್ತಾನೆ. ಸಂಸಾರವೆಲ್ಲವೂ ಕಾಮಮಯವಾಗಿರುತ್ತದೆ. ಈ ಪುರುಷನೂ ಕಾಮಮಯನೇ ಆಗಿರುತ್ತಾನೆ. ಇಂಥ ಕಾಮವು ಕಾಡಿನಲ್ಲಿರುವ ಹುಲಿ, ಸಿಂಹ – ಮುಂತಾದ ಕ್ರೂರಮೃಗಗಳಂತೆ ಮನುಷ್ಯನ ಮೇಲೆ ಎರಗಿ ಅವನನ್ನು ದಾರಿತಪ್ಪಿಸುವದು. ಆದರೆ ಅವಿವೇಕಿಯಾದವನಿಗೆ ಈ ಆಕ್ರಮಣವು ಗೊತ್ತಾಗುವದಿಲ್ಲ. ಸಾತ್ತ್ವಿಕನಾದವನಿಗೆ 'ಅಯ್ಯೋ ಕೆಟ್ಟೆನು ; ಈ ಕಾಮನಿಂದ ಹೇಗೆ ಬಿಡಿಸಿಕೊಳ್ಳಲಿ !' ಎಂಬ ಯೋಚನೆಯುಂಟಾಗುವದು. ಮತ್ತು ಈ ಕಾಮವು ಕ್ರೋಧವೇ ಮುಂತಾದ ನಾನಾರೂಪಗಳನ್ನೂ ತಳೆಯುತ್ತದೆಯಾಗಿ 'ಮಾತ್ಸರ್ಯ'ವೆಂಬ ಇದರ ರೂಪವು ಉಗ್ರವಾದ ಬಿಸಿಲಿನ ಬೇಗೆಗೆ ಸಮಾನವಾಗಿರುತ್ತದೆ. ದುಷ್ಟಮೃಗದ ಕಾಟದ ಜೊತೆಗೆ ಉರಿ ಬಿಸಿಲಿನ ಬೇಗೆಯೂ ಸೇರಿದರೆ ಕೇಳಬೇಕೆ ? ಹೀಗೆ ಕಾಮ– ಮಾತ್ಸರ್ಯಗಳಿಂದ ತುಂಬಿ ಬಳಲಿರುವ ನನ್ನನ್ನು ಎಲೈ ನರಸಿಂಹನೆ, ಕಾಪಾಡು – ಎಂದು ಇಲ್ಲಿ ಪ್ರಾರ್ಥಿಸಿದೆ.

**ಸಂಸಾರಕೂಪಮತಿಘೋರಮಗಾಧಮೂಲಂ**
**ಸಂಪ್ರಾಪ್ಯ ದುಃಖಶತಸರ್ಪಸಮಾಕುಲಸ್ಯ ।**
**ದೀನಸ್ಯ ದೇವ ಕೃಪಣಾಪದಮಾಗತಸ್ಯ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥ ೪ ॥**

**ಭಾವಾರ್ಥ :** ಮಹಾಘೋರವಾದ, ಮತ್ತು ದಾಟಲಸಾಧ್ಯವಾದ ಸಂಸಾರವೆಂಬ ಭಾವಿಗೆ ಬಿದ್ದು ದುಃಖಗಳೆಂಬ ನೂರಾರು ಹಾವುಗಳಿಂದ ಸುತ್ತುವರೆಯಲ್ಪಟ್ಟು ದೀನನಾಗಿ ತೀರ ಕಾರ್ಪಣ್ಯಕ್ಕೊಳಗಾಗಿರುವ ನನಗೆ ಲಕ್ಷ್ಮೀನರಸಿಂಹನೆ, ಕರಾವಲಂಬನವನ್ನು ಕೊಡು.

**ವಿವರಣೆ :**– ಕೆರೆ, ಭಾವಿ – ಮುಂತಾದ ಜಲಾಶಯಗಳು ಜನರಿಗೆ ಉಪಯೋಗಕರವಾದವುಗಳೇ ಆದರೂ ಎಚ್ಚರಿಕೆ ತಪ್ಪಿದಾಗ ಅನಾಹುತಕ್ಕೇ ಕಾರಣಗಳಾಗುವವು. ಕತ್ತಲೆಯಲ್ಲಂತೂ ಇವು ತುಂಬ ಅಪಾಯಕಾರಿಗಳೇ ಸರಿ. ಹಾಗೆಯೇ ಅಜ್ಞಾನವೆಂಬ ದಟ್ಟವಾದ ಕತ್ತಲೆಯು ಕವಿದಿರುವಾಗ ಬುಡವು ಗೊತ್ತಿಲ್ಲದ ಈ ಸಂಸಾರವೆಂಬ ಭಾವಿಯು ಜೀವರುಗಳಿಗೆ ತುಂಬ ಅಪಾಯಕಾರಿಯಾಗಿದೆ. ಜೊತೆಗೆ ನೀರಿಲ್ಲದ ಈ ಹಾಳುಭಾವಿಯಲ್ಲಿ ದುಃಖಗಳೆಂಬ ನೂರಾರು ಹಾವುಗಳೂ ಸೇರಿಕೊಂಡಿವೆಯಾಗಿ ಇನ್ನೂ ಕಷ್ಟಕರವಾಗಿದೆ. ಎಷ್ಟೋ ಜನರು ದುಃಖವನ್ನು ತಡೆಯಲಾರದೆ ಆತ್ಮಹತ್ಯೆಯನ್ನು ಮಾಡಿಕೊಳ್ಳುವರು. ಆದರೇನು ? ಅವರಿಗೆ ಇನ್ನೂ ಕೆಟ್ಟಜನ್ಮಗಳು ಬಂದು ಮತ್ತಷ್ಟು ದುಃಖವೇ ಉಂಟಾಗುವದು. ಆದ್ದರಿಂದ ಸಂಸಾರವನ್ನು ದಾಟಲು ಸಂಸಾರಗೋಚರವಾದ ಯಾವ ಉಪಾಯಗಳೂ ಉಪಯೋಗವಾಗಲಾರವು. ಯಾವನು ಈ ಸಂಸಾರವನ್ನು ದಾಟಿ ಇವನ್ನು ಮೀರಿ ನಿಂತಿರುವನೋ ಅಂಥವನನ್ನು ಆಶ್ರಯಿಸಿದರೆ ಮಾತ್ರ ಈ ಸಂಕಟದಿಂದ ಪಾರಾಗಬಹುದು. ಭಗವಂತನೊಬ್ಬನೇ ಅಂಥ ಪುರುಷೋತ್ತಮನು. ಅವನು ಆನಂದರೂಪನು, ಅವನಲ್ಲಿ ಯಾವ ದುಃಖಗಳೂ ಇರುವದಿಲ್ಲ. ಆದ್ದರಿಂದ ಸಂಸಾರದಿಂದ ಬಿಡಿಸಿ ಕಾಪಾಡು – ಎಂದು ಅವನನ್ನೇ ಬೇಡಿಕೊಳ್ಳಬೇಕು.

ದುಃಖಗಳನ್ನು ಇಲ್ಲಿ ಹಾವುಗಳಿಗೆ ಹೋಲಿಸಿರುವದು ಸಮಂಜಸವಾಗಿದೆ. ಹಾವುಗಳಂತೆ ವಿಷಮಯವೂ ನುಣುಚಿಕೊಳ್ಳುವವೂ ಆಗಿರುತ್ತವೆ. ಹಾವುಗಳನ್ನು ಹಿಡಿಯುವದು ಬಲುಕಷ್ಟ. ಹಿಡಿಯುವವರನ್ನೇ ಕೆಲವು ವೇಳೆ ಅವು ಕಚ್ಚುತ್ತವೆ. ಹಾಗೆಯೇ ದುಃಖಗಳನ್ನೂ ದಾಟಲು ಉಪಾಯಾಂತರಗಳನ್ನು ಕೈಗೊಂಡಾಗ ಹೊಸದುಃಖಗಳು ಎದ್ದುಕೊಳ್ಳುವವು. ಆದ್ದರಿಂದ ಭಗವಂತನ ಬೆಂಬಲವಿಲ್ಲದೆ

ಇವುಗಳನ್ನು ದಾಟಲಾಗುವದಿಲ್ಲ. ಅವನನ್ನೇ ಮೊರೆಹೋಗಬೇಕು – ಎಂದಭಿಪ್ರಾಯ.

**ಸಂಸಾರಸಾಗರವಿಶಾಲಕರಾಲಕಾಲ–**
**ನಕ್ರಗ್ರಹಗ್ರಸನನಿಗ್ರಹವಿಗ್ರಹಸ್ಯ ।**
**ವ್ಯಗ್ರಸ್ಯ ರಾಗರಸನೋರ್ಮಿನಿಪೀಡಿತಸ್ಯ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥ ೫ ॥**

**ಭಾವಾರ್ಥ :** ಸಂಸಾರವೆಂಬ ಸಮುದ್ರದಲ್ಲಿರುವ ದೊಡ್ಡದಾದ ಹಾಗೂ ಭಯಂಕರವಾದ ಕಾಲವೆಂಬ ಮೊಸಳೆಯ ಬಾಯಿಗೆ ತುತ್ತಾಗಿ ಸುಂಗಲ್ಪಟ್ಟ, (ವಿಷಯಗಳಲ್ಲಿ) ಪ್ರೀತಿಯೆಂಬ ಅಲೆಗಳಿಂದ ಪೀಡಿಸಲ್ಪಟ್ಟು ತಬ್ಬಿಬ್ಬಾಗಿರುವ ನನಗೆ ಎಲೈ ಲಕ್ಷ್ಮೀನರಸಿಂಹನೆ, ಕರಾವಲಂಬನವನ್ನು ಕೊಡು.

**ವಿವರಣೆ :** ಐತರೇಯೋಪನಿಷತ್ತಿನಲ್ಲಿ ಸಂಸಾರವನ್ನು ಸಮುದ್ರವೆಂದು ಕರೆದು ಭಗವಂತನು ಸೃಷ್ಟಿಸಿದ ಅಗ್ನ್ಯಾದಿದೇವತೆಗಳೂ ಕೂಡ ಈ ಸಮುದ್ರದಲ್ಲಿ ಬಿದ್ದರು – ಎಂದು ವರ್ಣಿಸಿದೆ. ಶ್ರೀಶಂಕರಾಚಾರ್ಯರು ಇಲ್ಲಿ ತಮ್ಮ ಭಾಷ್ಯದಲ್ಲಿ ಬಹುಸುಂದರವಾದ ವಿವರಣೆಯಿಂದ ಸಂಸಾರಸಮುದ್ರವನ್ನು ಪರಿಚಯಮಾಡಿಸಿದ್ದಾರೆ. ಸಮುದ್ರದಲ್ಲಿ ಅಗಾಧವಾದ ನೀರು ತುಂಬಿದೆ, ದೊಡ್ಡ ದೊಡ್ಡ ಮೊಸಳೆಗಳಿರುತ್ತವೆ. ಹಾಗೆಯೇ ಈ ಸಂಸಾರಸಮುದ್ರದಲ್ಲಿ ಅವಿದ್ಯೆ – ಕಾಮ – ಕರ್ಮಗಳಿಂದುಂಟಾದ ದುಃಖವೇ ದೊಡ್ಡ ಜಲರಾಶಿಯು ; ತೀವ್ರವಾದ ರೋಗಗಳು, ಮುಪ್ಪು, ಮರಣಗಳೆಂಬಿವೇ ದೊಡ್ಡ ಮೊಸಳೆಗಳು. ಸಮುದ್ರಕ್ಕೆ ಬುಡವಾಗಲೀ ತುದಿಯಾಗಲೀ ಕಾಣದೆ ಇರುವಂತೆ ಈ ಸಂಸಾರಕ್ಕೂ ಆದಿ–ಅಂತಗಳು ಇರುವದಿಲ್ಲ; ಏನೊಂದೂ ಅವಲಂಬನೆಯೂ ಇರುವದಿಲ್ಲ. ಆದರೂ ಜೀವನದಲ್ಲಿ ವಿಷಯ, ಇಂದ್ರಿಯಗಳ ಕೂಡುವಿಕೆಯಿಂದುಂಟಾದ 'ಸುಖದ ಹನಿ'ಯೆಂಬ ಅನಿತ್ಯವಾದ ವಿಶ್ರಾಂತಿಸ್ಥಾನವು ಆಗಾಗ್ಗೆ ತೋರಿಕೊಳ್ಳುವದು. ಐದು ಇಂದ್ರಿಯಗಳ ಚಾಪಲ್ಯರೂಪವಾದ ಬಿರುಗಾಳಿಯಿಂದ ಎದ್ದ ನೂರಾರು ಅನರ್ಥಗಳೆಂಬ ದೊಡ್ಡ ಅಲೆಗಳು ಇದರಲ್ಲಿ ಕಂಡುಬರುತ್ತಿರುವವು.

ಇನ್ನು ಸಮುದ್ರದಲ್ಲಿ ಕಂಡುಬರುವ ಭಯಂಕರವಾದ ಶಬ್ದದಂತೆ ಈ ಸಂಸಾರದಲ್ಲಿ ಪಾಪಕರ್ಮಗಳ ಫಲವಾಗಿ ಜೀವರುಗಳು ಮಹಾರೌರವಾದಿನರಕಗಳಲ್ಲಿ ಬಿದ್ದು ಪಾಪದ ಫಲವನ್ನು ಅನುಭವಿಸುವಾಗ ಅಲ್ಲಿರುವ ಯಮನ ಭಟರ ಶಿಕ್ಷೆಗಳಿಂದ ನೊಂದವರಾಗಿ 'ಹಾ ಹಾ' ಎಂದು ಕಿರುಚುತ್ತಾ ಶಬ್ದ ಮಾಡುತ್ತಿರುವರು.

ಇಂಥ ಭಯಂಕರವಾದ ಸಂಸಾರಸಮುದ್ರದಲ್ಲಿ ಒಂದು ಹಡಗನ್ನು ಭಗವಂತನು ಜೀವರುಗಳ ಉದ್ಧಾರಕ್ಕಾಗಿ ತೇಲಿಬಿಟ್ಟಿರುವನು. ಪೂರ್ಣ ಜ್ಞಾನವೆಂಬುದೇ ಅದು. ಹಡಗಿನಲ್ಲಿ ಆಹಾರ, ವಸತಿ, ವಿಶ್ರಾಂತಿ ಮುಂತಾಗಿ ಎಲ್ಲಾ ಸೌಕರ್ಯಗಳಿರುವಂತೆ ಇಲ್ಲಿ ಸತ್ಯ, ಸರಳತೆ, ದಾನ, ದಯೆ, ಅಹಿಂಸೆ, ಶಮದಮಾದಿಗಳು, ಮನಸ್ಸಿನ ಸ್ಥಿರತೆ – ಮುಂತಾದ ಆತ್ಮಗುಣಗಳೆಂಬ ಸೌಕರ್ಯ ಗಳೂ ಬುತ್ತಿ (ಆಹಾರ)ಯೂ ಇವರಲ್ಲಿ ಅಡಕವಾಗಿರುವದು. ಹಡಗಿಗೆ ಪ್ರಯಾಣಕ್ಕೆ ಗೊತ್ತಾದ ದಾರಿಯಿರುವಂತೆ ಇಲ್ಲಿಯೂ ಸತ್ಸಂಗ, ಸರ್ವತ್ಯಾಗ ಗಳೆಂಬ ಮಾರ್ಗಗಳಿರುವವು. ತಲುಪಬೇಕಾದ ದಡವು ಮೋಕ್ಷವು. ಹೀಗಿರುವದ ರಿಂದ ಯಾರಿಗೆ ಈ ಪೂರ್ಣಜ್ಞಾನವೆಂಬ ಹಡಗಿನ ಸೌಕರ್ಯವಿರುವದೋ ಅವರು ಈ ಸಂಸಾರಸಮುದ್ರಯಾನಕ್ಕೆ ಅಂಜಬೇಕಾಗಿರುವದಿಲ್ಲ.

ಆದರೆ ಈ ಜ್ಞಾನವೆಂಬುದನ್ನು ನಾವು ಭಗವಂತನಿಗೆ ಶರಣರಾಗದೆ ಪಡೆಯಲಾಗುವದಿಲ್ಲ. ಭಗವಂತನ ನೆನಪು ಬರಬೇಕಾದರೆ ಈ ಸಂಸಾರದುಃಖಗಳ ಅನುಭವವಾಗಬೇಕು. 'ಸಂಕಟಬಂದಾಗ ವೆಂಕಟರಮಣ' ಎಂಬಂತೆ ಇಲ್ಲಿ ಸಂಸಾರದುಃಖದಿಂದ ಬಳಲಿರುವ ಸಾಧಕನು ದೀನನಾಗಿ ಬೇಡಿಕೊಳ್ಳುತ್ತಿದ್ದಾನೆ. 'ಎಲೈ ದೇವನೆ, ನಾನು ಈ ಮಹಾಸಂಸಾರಸಮುದ್ರದಲ್ಲಿ ಮೃತ್ಯುವೆಂಬ ಮೊಸಳೆಗೆ ಸಿಕ್ಕಿ ನುಂಗಲ್ಪಡುತ್ತಿದ್ದೇನೆ. ವಿಷಯಗಳ ಮೇಲಿನ ಪ್ರೀತಿಯೂ ನನ್ನನ್ನು ಅಲೆಗಳಂತೆ ಚಂಚಲಗೊಳಿಸುತ್ತಿದೆ. ಇಂಥ ಸಂದರ್ಭದಲ್ಲಿ ನನಗೆ ನೀನೊಬ್ಬನೇ ಗತಿ ; ಆದ್ದರಿಂದ ಕೈಹಿಡಿದು ಕಾಪಾಡು' ಎಂದು ಇಲ್ಲಿ ಪ್ರಾರ್ಥಿಸಿದೆ.

ಸಂಸಾರವೃಕ್ಷಮಘಬೀಜಮನಂತಕರ್ಮ–
ಶಾಖಾಶತಂ ಕರಣಪತ್ರಮನಂಗಪುಷ್ಪಮ್ ।
ಆರುಹ್ಯ ದುಃಖಫಲಿತಂ ಪತತೋ ದಯಾಳೋ
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥ ೬ ॥

**ಭಾವಾರ್ಥ** : ಪಾಪವೆಂಬ ಬೀಜದಿಂದ ಮೊಳೆತು ನಾನಾ ಕರ್ಮಗಳೆಂಬ ಕೊಂಬೆರೆಂಬೆಗಳಿಂದ ಹರಡಿಕೊಂಡುಬೆಳೆದು, ಇಂದ್ರಿಯಗಳೆಂಬ ಎಲೆಗಳು, ಕಾಮವೆಂಬ ಹೂವುಗಳಿಂದ ಕೂಡಿರುವ ದುಃಖವೆಂಬ ಹಣ್ಣುಗಳುಳ್ಳ ಈ ಸಂಸಾರವೆಂಬ ಮರವನ್ನು ಹತ್ತಿ, ಕೆಳಕ್ಕೆ ಇಳಿಯಲಾರದೆ ಬೀಳುತ್ತಿರುವ ನನ್ನನ್ನು ಎಲೈ ದಯಾಳುವಾದ ಲಕ್ಷ್ಮೀನರಸಿಂಹನೆ, ಕರಾವಲಂಬನೆಯನ್ನು ನೀಡಿ ಕಾಪಾಡು !

**ವಿವರಣೆ** :– ಸಂಸಾರವನ್ನು ಇಲ್ಲಿ ಮರಕ್ಕೆ ಹೋಲಿಸಿರುತ್ತದೆ. ಮರವನ್ನು ಹತ್ತುವವನಿಗೆ ಧೈರ್ಯವಿರಬೇಕು ; ಇಳಿಯುವ ಜಾಣತನವೂ ತಿಳಿದಿರಬೇಕು. ಹಾಗಿಲ್ಲದಿದ್ದರೆ ಹತ್ತಿದಮೇಲೆ ಭಯದಿಂದ ಕೆಳಗೆ ನೋಡಿದಲ್ಲಿ ಬೀಳುವನು. ಹಾಗೆಯೇ ಈ ಸಂಸಾರವೆಂಬ ವೃಕ್ಷವನ್ನು ಹತ್ತಿರುವ ಅಜ್ಞಾನಿಯಾದ ಜೀವನು ಭಯದಿಂದ ದಿಕ್ಕುಗಾಣದೆ ಬೀಳುತ್ತಿರುವನು – ಎಂದು ಇಲ್ಲಿ ವರ್ಣಿಸಿದೆ.

ಆದರೆ ಹತ್ತಿದಮೇಲೆ ಮರದ ಮೇಲೆಯೇ ಕುಳಿತು ನೆರಳಿನಲ್ಲಿ ಹಣ್ಣುಗಳನ್ನು ತಿನ್ನುತ್ತಾ ಸುಖವಾಗಿರಬಹುದಲ್ಲ! ಚಿಂತೆಯೇಕೆ ? ಎಂದರೆ ಹಾಗಿಲ್ಲ. ಈ ಸಂಸಾರದ ಬೀಜವು ಪಾಪವೆಂಬುದಾದ್ದರಿಂದ ಅದು ಕಹಿಬೀಜವಾಗಿದ್ದು ಮರವೆಲ್ಲ ಕಹಿಯಾಗೇ ಇದೆ ; ಮತ್ತು ನಾನಾಕರ್ಮಗಳೆಂಬ ಶಾಖೋಪಶಾಖೆಗಳು ಸುತ್ತಲೂ ಹರಡಿಕೊಂಡಿರುವಲ್ಲಿ ಫಲವನ್ನು ತಿನ್ನುವ ಆಶೆಯಿಂದ ಕೊಂಬೆಗಳಿಂದ ಕೊಂಬೆಗಳಿಗೆ ಓಡಾಡುವ ಭರದಲ್ಲಿ ಬುಡವೆಂಬುದೇ ಮರೆತುಹೋಗಿ ಸಿಗದಂತಾಗಿಬಿಟ್ಟಿದೆ. ಕೊಂಬೆಗಳ ತುಂದಿಗೆ ಹೋದಂತೆಲ್ಲ ಅಪಾಯವು ಹೆಚ್ಚಾಗುವಂತೆ ಫಲಾಶೆಯಿಂದ ಕರ್ಮಗಳನ್ನು ಮಾಡಿದಂತೆಲ್ಲಾ ದುಃಖವು ಬೆಳೆಯುತ್ತಲೇ ಇರುವದು. ಹೀಗಾಗಿ ಬೀಳುವ ಸಂಭವವೇ ಹೆಚ್ಚಾಗಿರುತ್ತದೆ.

ಇಂದ್ರಿಯಗಳು ಮರದ ಎಲೆಗಳಂತೆ ಯಾವಾಗಲೂ ಚಂಚಲವಾಗಿದ್ದು ಅಲ್ಲಾಡುತ್ತಲೇ ಇರುವವು. ಕಾಮವೆಂಬ ಹೂವು ಅರಳಿದೆಯಾದರೂ ಅದರ ರಸವು ಕಹಿ. ಇಂದ್ರಿಯಗಳ ಸುಖವು ದುಃಖಕ್ಕೇ ಮೂಲವು, ವಿವೇಕಿಯಾದವನು ಅವರಲ್ಲಿ ಆಸಕ್ತನಾಗಿರುವದಿಲ್ಲ – ಎಂದು ಭಗವಂತನೂ ಹೇಳಿರುತ್ತಾನೆ. ಹೀಗಿರುವಾಗ ಜೀವನಿಗೆ ಸುಖವೆಂಬುದೆಲ್ಲಿ ಬಂತು ? ಆದ್ದರಿಂದ ದಯಾಳುವಾದ ದೇವನೆ, ನನ್ನನ್ನು ಕಾಪಾಡು – ಎಂದು ಭಕ್ತನು ಬೇಡಿಕೊಂಡಿರುತ್ತಾನೆ.

ಇನ್ನೊಂದು ವಿಚಾರ : ವ್ಯವಹಾರದೃಷ್ಟಿಯಿಂದ ಹೀಗೆ ಸಂಸಾರವೃಕ್ಷವು ವಿಷಮಯವಾಗಿದ್ದರೂ ಇದರ ನಿಜವಾದ ಮೂಲವು ಭಗವಂತನು. ಈ ವೃಕ್ಷವು ನೆಲದಲ್ಲಿ ಬೇರು, ಆಕಾಶದಕಡೆಗೆ ಕೊಂಬೆರೆಂಬೆಗಳು ಹರಡಿರುವ ಲೋಕದಲ್ಲಿರುವ ಮರಗಳಂತೆ ಇರುವದಿಲ್ಲ. ಇದರ ಬುಡವೇ ಮೇಲುಭಾಗದಲ್ಲಿರುತ್ತದೆ. ಊರ್ಧ್ವಮೂಲವಾಗಿರುವ ಈ ಮರದ ಬೀಜವೂ ಹುಸಿಯಾಗಿರುತ್ತದೆ. ಆದ್ದರಿಂದ ಇದು ಎಷ್ಟೇ ಶಾಖೋಪಶಾಖೆಗಳಾಗಿ ಹರಡಿಕೊಂಡಿದ್ದರೂ ಬುಡವನ್ನು ಚೆನ್ನಾಗಿ ಅರಿತಲ್ಲಿ ಇದು ನಾಶವಾಗುವದು. ಭಗವಂತನೇ ಇದರ ಬೇರು. ಅವನನ್ನು ಆಶ್ರಯಿಸಿದರೆ ಈ ಸಂಸಾರವೃಕ್ಷದಲ್ಲಿ ದೊರೆಯಬಹುದಾದ ಎಲ್ಲಾ ಫಲಗಳನ್ನೂ ಒಟ್ಟಿಗೆ ಪಡೆಯಬಹುದು ; ಹಾಗೂ ಬೀಜ – ಫಲಭಾವವನ್ನೂ ಮೀರಿ ನಿತ್ಯಾನಂದಸ್ವರೂಪರಾಗಿಯೇ ಬಾಳಬಹುದು. ಆದ್ದರಿಂದ ಈ ಸಂಸಾರವನ್ನು ನೆಪಮಾಡಿಕೊಂಡು ಬೇರಿನಂತಿರುವ ನಿತ್ಯಶುದ್ಧಬುದ್ಧ ಮುಕ್ತಸ್ವಭಾವನಾದ ಭಗವಂತನನ್ನು ಅರಿತು ಕೃತಕೃತ್ಯರಾಗಬೇಕೆಂದೂ ತಿಳಿಸಿದಂತೆ ಆಗಿರುತ್ತದೆ.

ಸಂಸಾರಸರ್ಪಘನವಕ್ತ್ರಭಯೋಗ್ರತೀವ್ರ–
ದಂಷ್ಟ್ರಾಕರಾಲವಿಷದಗ್ಧವಿನಷ್ಟಮೂರ್ತೇಃ ।
ನಾಗಾರಿವಾಹನ ಸುಧಾಬ್ಧಿನಿವಾಸ ಶೌರೇ
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥ ೭ ॥

**ಭಾವಾರ್ಥ :** ಸಂಸಾರವೆಂಬ ಹಾವಿನ ದವಡೆಯಲ್ಲಿರುವ ಭಯಂಕರವೂ ಘೋರವೂ ತೀವ್ರವೂ ಆದ ದೃಢವಾದ ವಿಷದ ಹಲ್ಲುಗಳಿಂದ ಕಚ್ಚಲ್ಪಟ್ಟು ನಷ್ಟವಾದ ಶರೀರವುಳ್ಳ ನನಗೆ ಎಲೈ ಗರುಡವಾಹನನೆ, ಕ್ಷೀರಸಾಗರವಾಸಿಯಾದ ಶೌರಿಯೆ, ಲಕ್ಷ್ಮೀನೃಸಿಂಹನೆ, ಕರಾವಲಂಬನವನ್ನು ಕೊಡು.

**ವಿವರಣೆ :–** ಇಲ್ಲಿ ಸಂಸಾರವನ್ನು ವಿಷದ ಹಾವಿಗೆ ಹೋಲಿಸಿದೆ. ಹಾವಿನ ಹಲ್ಲಿನಲ್ಲಿರುವ ವಿಷವು ತೀವ್ರವಾದದ್ದು. ಅದು ಶರೀರವನ್ನು ವ್ಯಾಪಿಸಿದಲ್ಲಿ ಸಾಯುವದು ನಿಶ್ಚಿತ. ಹಾಗೆಯೇ ಸಂಸಾರವೆಂಬುದೂ ತನ್ನ ವಿಷರೂಪವಾದ ವಿಷಯಗಳೆಂಬ ಹಲ್ಲಿನಿಂದ ಜೀವನನ್ನು ಕಚ್ಚಿರುತ್ತದೆ. ಬೃಹದಾರಣ್ಯಕೋಪನಿಷತ್ತಿನಲ್ಲಿ ಇಂದ್ರಿಯಗಳನ್ನು ಗ್ರಹಗಳೆಂದೂ ವಿಷಯಗಳನ್ನು ಅತಿಗ್ರಹಗಳೆಂದೂ ವರ್ಣಿಸಿರುತ್ತದೆ. ಗ್ರಹಗಳೆಂದರೆ ಹಿಡಿಯುವವು ; ಅತಿಗ್ರಹಗಳೆಂಬಿವು ಗ್ರಹಗಳನ್ನೇ ಹಿಡಿಯುವಂಥವು. ಇವೆರಡೂ ಸಂಸಾರವೆಂಬ ಸರ್ಪದ ದಂಷ್ಟ್ರಗಳು. ಇವುಗಳು ಯಾರನ್ನು ಹಿಡಿದಿವೆಯೋ ಅವರು ವಿಷವೇರಿದವರಂತೆ ಮೃತ್ಯುವಶರೇ ಆಗುತ್ತಾರೆ. ಗ್ರಹಾತಿಗ್ರಹಗಳಿಂದ ಮುಕ್ತರಾಗುವದು ಒಂದು ದೊಡ್ಡ ಸಾಹಸವೇ ಸರಿ. ಅದಕ್ಕೆ ಭಗವಂತನ ಅನುಗ್ರಹವೇ ಬೇಕು.

ಈ ಸಂಸಾರಸರ್ಪವು ಇಂಥ ಬಲಿಷ್ಠವಾದದ್ದಾದರೂ ಗರುಡವಾಹನನಾದ ಭಗವಂತನ ದೃಷ್ಟಿಯು ಬಿದ್ದಿತೆಂದರೆ ಹೇಳಹೆಸರಿಲ್ಲದ್ದಾಗುವದು. ಗರುಡನಿಗೆ ಎಂಥ ವಿಷದ ಹಾವನ್ನಾದರೂ ಕೊಲ್ಲುವ ಸಾಮರ್ಥ್ಯವಿದೆ. ಆತನನ್ನೇ ಭಗವಂತನು ವಾಹನವಾಗುಳ್ಳವನು. ರಾಮಾಯಣದ ಯುದ್ಧಕಾಂಡದಲ್ಲಿ ಇಂದ್ರಜಿತ್ ಎಂಬ ರಾಕ್ಷಸನು ನಾಗಪಾಶಗಳಿಂದ ರಾಮಲಕ್ಷ್ಮಣರ ಸಮೇತವಾಗಿ ವಾನರಸೇನೆಯನ್ನೆಲ್ಲ ಕಟ್ಟಿಹಾಕಿದ್ದನು. ಆದರೇನು ? ಗರುಡನು ಬಂದಕೂಡಲೆ ಆ ಪಾಶಗಳೆಲ್ಲ ಕಿತ್ತುಕೊಂಡುಹೋಗಿಬಿಟ್ಟವು. ಹಾವುಗಳೆಲ್ಲ ಪಲಾಯನಮಾಡಿದವು. ಅದರಂತೆ ಗರುಡಧ್ವಜನೂ ಗರುಡವಾಹನನೂ ಆದ ವಿಷ್ಣುವು ಈ ಸಂಸಾರವೆಂಬ ಘನಸರ್ಪವನ್ನು ಮರ್ದನಮಾಡಲು ಸಂಪೂರ್ಣಸಮರ್ಥನು. ಅವನನ್ನೇ ಇಲ್ಲಿ ಭಕ್ತನು ಶರಣುಹೊಕ್ಕಿರುತ್ತಾನೆ. ಈವರೆಗೆ ಕಡಿಯಲ್ಪಟ್ಟಿದ್ದರಿಂದ

ವ್ಯಾಪಿಸಿರಬಹುದಾದ ವಿಷದ ತಾಪವನ್ನು ಕ್ಷೀರಸಾಗರವಾಸಿಯಾದ ಆ ಜನಾರ್ದನನೇ ಪರಿಹರಿಸಬಲ್ಲನು. ಹೇಗೆಂದರೆ ಅಮೃತವು ಕ್ಷೀರಸಾಗರಮಥನ ದಿಂದಲೇ ಹುಟ್ಟಿತು. ಅದನ್ನು ದೇವತೆಗಳಿಗೆ ಉಣಬಡಿಸಿದವನೂ ವಿಷ್ಣುವೇ. ಆದ್ದರಿಂದ ಆವನನ್ನು ಮೊರೆಹೊಕ್ಕವರಿಗೆಲ್ಲ ಅಮೃತವನ್ನು ಪಾನಮಾಡಿಸಿ ವಿಷದ ತಾಪವನ್ನು ಹೋಗಲಾಡಿಸುತ್ತಾನೆ. ಶ್ರೀಮಹಾವಿಷ್ಣುವಿನ ದಯೆಯು ಜೀವರುಗಳ ಮೇಲೆ ಯಾವಾಗಲೂ ಇದ್ದುಕೊಂಡೇ ಇದೆ. ಆದರೆ ಜೀವರುಗಳು ತಮ್ಮ ಅಹಂಕಾರದಿಂದ ಆವನನ್ನಾಶ್ರಯಿಸದೆ ವಿಷತಪ್ತರಾಗಿರುತ್ತಾರೆ. ಸುಕೃತಿಗಳು ಮಾತ್ರ ಆವನನ್ನು ಬಳಿಸಾರಿ ತಮ್ಮ ಸಂಸಾರವಿಷತಾಪವನ್ನು ಪರಿಹರಿಸಿಕೊಳ್ಳುತ್ತಾರೆ – ಎಂಬ ಭಾವವು ಇಲ್ಲಿ ಸೂಚಿತವಾಗಿದೆ.

**ಸಂಸಾರದಾವದಹನಾತುರಭೀಕರೋರು–**
**ಜ್ವಾಲಾವಲೀಭಿರತಿದಗ್ಧತನೂರುಹಸ್ಯ ।**
**ತ್ವತ್ಪಾದಪದ್ಮಸರಸೀಶರಣಾಗತಸ್ಯ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥ ೮ ॥**

**ಭಾವಾರ್ಥ :** ಸಂಸಾರವೆಂಬ ಭಯಂಕರವಾದ ಸುಡುವ ಸ್ವಭಾವದ ಕಾಡುಗಿಚ್ಚಿನ ಉರಿಯ ಪಂಕ್ತಿಗಳಿಂದ ಅತಿಯಾಗಿ ಸುಡಲ್ಪಟ್ಟ ಶರೀರವುಳ್ಳ ಮತ್ತು ನಿನ್ನ ಪಾದಕಮಲಗಳಿಗೆ ಶರಣಾಗತನಾಗಿ ಬಂದಿರುವ ನನ್ನನ್ನು ಎಲೈ ಲಕ್ಷ್ಮೀನೃಸಿಂಹನೆ, ಕರಾವಲಂಬನೆಯನ್ನು ಕೊಟ್ಟು ಸಲಹು.

**ವಿವರಣೆ :–** ಕಾಡಿನಲ್ಲಿ ಬಿದಿರುಮೆಳೆಗಳು ಗಾಳಿಯಿಂದ ಒಂದಕ್ಕೊಂದು ಉಜ್ಜುವದರಿಂದಾಗಲಿ ಜನರು ಎಸೆಯುವ ಬೆಂಕಿಯ ಕಿಡಿಗಳಿಂದಾಗಲಿ ಕಾಡುಗಿಚ್ಚು ಹೊತ್ತಿಕೊಂಡು ವನವನ್ನೆಲ್ಲ ಸುಡುತ್ತದೆ. ಎಷ್ಟೋ ಪ್ರಾಣಿಗಳು ಈ ಕಾಡುಗಿಚ್ಚಿಗೆ ಸಿಕ್ಕಿ ಸತ್ತುಹೋಗುವವು. ದೂರದಿಂದ ನೋಡಿದಾಗಲೇ ಭಯಂಕರವಾಗಿ ಕಾಣುವ ಕಾಡುಗಿಚ್ಚು ಹತ್ತಿರಕ್ಕೆ ಹೋದಂತೆಲ್ಲ ಮತ್ತಷ್ಟು ಅಪಾಯಕಾರಿಯಾಗಿರುವದು. ಅದರಂತೆ ಈ ಸಂಸಾರವೆಂಬ ಕಾಡಿನಲ್ಲೂ ಕಾಮ, ರಾಗ – ಇವುಗಳ ಬೆಂಕಿಯು ಹೊತ್ತಿ ಉರಿಯುತ್ತಿರುವದು, ಅಸೂಯೆ, ಹಗೆತನ, ಮಾತ್ಸರ್ಯ, ಅಸಹನೆ – ಮುಂತಾದ ಅದರ ಜ್ವಾಲೆಗಳಿಗೇನೂ ಇಲ್ಲಿ

ಕಡಿಮೆಯಿಲ್ಲ. ಇವುಗಳು ಒಬ್ಬೊಬ್ಬ ವ್ಯಕ್ತಿಯ ಅಂತಃಕರಣದಲ್ಲಿಯೂ ಮನೆಮಾಡಿ ಕೊಂಡಿರುತ್ತವೆ. ಆಸುರೀಸಂಪತ್ತಿನ ಜನರಲ್ಲಂತೂ ಇವು ಅತ್ಯಧಿಕವಾದ ಪ್ರಮಾಣದಲ್ಲಿರುತ್ತವೆ. ಇದರಿಂದಲೇ ಪ್ರಪಂಚದಲ್ಲಿ ಹಿಂಸೆಯೂ ಅಶಾಂತಿಯೂ ಎಲ್ಲೆಲ್ಲೂ ತುಂಬಿತುಳುಕುತ್ತಿದೆ. ಇದನ್ನು ಆರಿಸುತ್ತೇವೆಂದು ಹೊರಟವರೂ ಬೇರೊಂದು ರೀತಿಯಿಂದ ಮತ್ತೆ ಭುಗಿಲೆಬ್ಬಿಸುತ್ತಿದ್ದಾರೆ. ಇಂಥ ಕಾಡುಗಿಚ್ಚಿನ ಅಪಾಯವುಳ್ಳ ಕಾಡಿನಲ್ಲಿ ನಮ್ಮನ್ನು ಕಾಪಾಡುವವರು ಯಾರು ?

ಈ ಮಹಾದುಃಖವನ್ನು ಹೋಗಲಾಡಿಸುವ ಸಾಮರ್ಥ್ಯವುಳ್ಳವನು ಭಗವಂತನೊಬ್ಬನೇ. ಆದ್ದರಿಂದ ಮೊದಲು ನಾವು ಕಾಡುಗಿಚ್ಚಿಗೆ ಸಿಕ್ಕಿದ್ದೇವೆಂಬ ತಿಳಿವಳಿಕೆಯನ್ನು ಮಾಡಿಕೊಳ್ಳಬೇಕು. ಅನಂತರ ಭಗವಂತನನ್ನು ಆಶ್ರಯಿಸಬೇಕು. ಆ ಭಗವಂತನು ನಮಗೆ ಎಟುಕದೆ ಇದ್ದರೂ ಅವನ ಪಾದಪದ್ಮಗಳಾದರೂ ದೊರಕಿದರೆ ಅವುಗಳೇ ಸಾಕು. ನಮ್ಮನ್ನು ಈ ತಾಪದಿಂದ ಪಾರುಮಾಡಬಲ್ಲವು. ಆ ಭಗವಂತನಲ್ಲಿ ಇಂಥ ಸಂಸಾರತಾಪಗಳಿರುವದಿಲ್ಲ. ಆತನು ಬೆಳದಿಂಗಳಿನಂತೆ ಸುಖಪ್ರದನು. ಅಮೃತಸ್ವರೂಪನಾದ್ದರಿಂದ ತಂಪಾದ ಶರೀರವುಳ್ಳವನು. ಅವನ ಕೋಮಲಪಾದಗಳು ಯಾವಾಗಲೂ ಭಕ್ತರಿಗೆ ಶಾಂತಿದಾಯಕವಾಗಿರುವವು. ಅವನ ದರ್ಶನ, ಸೇವೆ, ಸಂಭಾಷಣೆ, ಪ್ರಸಾದ, ಸಾಮೀಪ್ಯ – ಇವುಗಳು ದೊರೆತರಂತೂ ಈ ಸಂಸಾರಾಗ್ನಿಯ ತಾಪವು ಸಂಪೂರ್ಣವಾಗಿ ಇಲ್ಲವಾಗುವದು. ಎರಡು ಅಮೃತಸರೋವರಗಳಂತಿರುವ ಆತನ ಪಾದಪದ್ಮಗಳು ಸಮಸ್ತಸಂಸಾರಿಜೀವರ ಹೃತ್ತಾಪ, ಶರೀರತಾಪಗಳನ್ನೆಲ್ಲ ಶಮನಗೊಳಿಸಿ ದುಃಖದಿಂದ ಕಾಪಾಡಲು ಸಮರ್ಥವಾಗಿರುವವು. ಅವುಗಳಿಗೆ ಶರಣಾಗತರಾದವರೇ ಧನ್ಯರು – ಎಂದು ತಿಳಿಸಿದೆ.

**ಸಂಸಾರಜಾಲಪತಿತಸ್ಯ ಜಗನ್ನಿವಾಸ**
**ಸರ್ವೇಂದ್ರಿಯಾರ್ಥಬಡಿಶಾರ್ಥಝಷೋಪಮಸ್ಯ ।**
**ಪ್ರೋತ್ಖಂಡಿತಪ್ರಚುರತಾಲುಕಮಸ್ತಕಸ್ಯ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥ ೯ ॥**

**ಭಾವಾರ್ಥ :** ಎಲೈ ಜಗನ್ನಿವಾಸನೆ, ಸಂಸಾರವೆಂಬ ಬಲೆಯಲ್ಲಿ ಸಿಕ್ಕಿ ಎಲ್ಲಾ ಜ್ಞಾನ –ಕರ್ಮೇಂದ್ರಿಯಗಳು, ಅವುಗಳ ವಿಷಯಗಳೆಂಬ ಗಾಳಕ್ಕೆ ಸಿಕ್ಕಿದ ಮೀನಿನಂತಿರುವ, ಮತ್ತು ಹೆಚ್ಚಾಗಿ ತುಂಡುಮಾಡಲ್ಪಟ್ಟ ಮುಖತಲೆಗಳುಳ್ಳ ನನಗೆ ಲಕ್ಷ್ಮೀನೃಸಿಂಹನೆ, ಕರಾವಲಂಬನವನ್ನು ಕೊಟ್ಟು ಕಾಪಾಡು.

**ವಿವರಣೆ :–** ಇಲ್ಲಿ ಸಂಸಾರವನ್ನು ಮೀನುಹಿಡಿಯುವ ಬಲೆ ಹಾಗೂ ಗಾಳಗಳಿಗೆ ಹೋಲಿಸಿರುತ್ತದೆ. ಮೀನು, ಜಿಂಕೆ, ದುಂಬಿ – ಇವುಗಳು ಚಂಚಲ ಸ್ವಭಾವದವು. ಹಾಗೆಯೇ ನಮ್ಮ ಇಂದ್ರಿಯಗಳೂ ಮನಸ್ಸೂ ತುಂಬ ಚಂಚಲವಾದವುಗಳು. ಗಾಳದಲ್ಲಿ ಸಿಕ್ಕಿಸಿರುವ ಎರೆಯಹುಳುವಿನ ವಾಸನೆಗೆ ಮರುಳಾಗಿ ಮೀನು ಬೆಸ್ತರ ಗಾಳಕ್ಕೆ ಬಲಿಯಾಗಿ ಪ್ರಾಣವನ್ನು ಕಳೆದುಕೊಳ್ಳುತ್ತದೆ. ಮೀನು ಸಿಕ್ಕಿಕೊಂಡ ಕೂಡಲೆ ಬೆಸ್ತನು ಗಾಳವನ್ನೆತ್ತಿ ಮೀನನ್ನು ನೆಲದಮೇಲೆ ಬಡಿಯುವದನ್ನು ನಾವೆಲ್ಲರೂ ನೋಡಿರುತ್ತೇವೆ. ಹಾಗೆಯೇ ಇಂದ್ರಿಯಗಳ ತೃಪ್ತಿಗಾಗಿ ಮನಸ್ಸು ವಿಷಯಗಳನ್ನು ಹುಡುಕುತ್ತಾ ಎರೆಯಹುಳುವಿನಂತಿರುವ ವಿಷಯಗಳು ದೊರೆಯಲಾಗಿ ಅವುಗಳ ಆಶೆಯಿಂದ ಸಂಸಾರದಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ. ಮೃತ್ಯುವೆಂಬ ಬೆಸ್ತನು ಅದನ್ನು ಮೇಲಕ್ಕೆತ್ತಿ ಬಡಿದಾಗ ಈ ಜೀವನು ತಾನುತನ್ನದೆಂತ ಅಭಿಮಾನಮಾಡಿಕೊಂಡಿರುವ ಈ ದೇಹವು ನುಚ್ಚುನೂರಾಗುತ್ತದೆ. ಇದನ್ನೇ ಇಲ್ಲಿ ತುಂಡರಿಸಲ್ಪಟ್ಟ ಮುಖತಲೆಗಳುಳ್ಳವನಾಗಿ ದೇನೆ – ಎಂದು ಸಾಧಕನು ಹೇಳಿಕೊಳ್ಳುತ್ತಿದಾನೆ.

ವಿಷಯಗಳನ್ನು ಕಂಡಾಗ ಇಂದ್ರಿಯಗಳೂ ಮನಸ್ಸೂ ಎರಗುವದು ಸ್ವಭಾವವಾದ್ದರಿಂದ ಈ ದುಃಖದಿಂದ ಬಿಡುಗಡೆ ಹೇಗೆ ? ಎಂದರೆ ಈ ಸಂಸಾರವೆಂಬ ಮಾಯಾಜಾಲವನ್ನು ಒಡ್ಡಿರುವ ಲಕ್ಷ್ಮೀನೃಸಿಂಹನಿಗೇ ಶರಣುಹೋಗಬೇಕು. 'ಭಗವಂತನನ್ನೇ ಯಾರು ಬಳಿಸಾರುವರೋ ಅವರು ಮಾಯೆಯನ್ನು ದಾಟುವರು' ಎಂದು ಗೀತೆಯಲ್ಲಿ ಹೇಳಿರುವಂತೆ ನಾವು ಮಹಾಜಾಲಗಾರನಾದ ಭಗವಂತನನ್ನೇ ಮೊರೆಹೋಗಬೇಕು. ಆದರೆ ಮೊದಲು ನಮಗೆ ಈ ಭವಜಾಲದಲ್ಲಿ ಸಿಕ್ಕಿಬಿದ್ದಿದ್ದೇವೆಂಬ ಅರಿವು ಉಂಟಾಗಬೇಕು.

ಅದನ್ನಾದರೂ ಆಗಾಗ್ಗೆ ನಮಗೆ ಪ್ರಾಪ್ತವಾಗುವ ದುಃಖಗಳಿಂದ ಗುರುತಿಸಿ ಭಗವಂತನಿಗೆ ಶರಣುಹೋಗು ಬುದ್ಧಿಯನ್ನು ಕಲಿತುಕೊಂಡಲ್ಲಿ ಮುಂದೆ ಆ ಸ್ವಾಮಿಯ ಅನುಗ್ರಹದಿಂದ ಸಂಸಾರದಿಂದ ಪಾರಾಗಬಹುದಾಗಿದೆ. ಅಂಥ ಪುಣ್ಯವಾದರೂ ನಮ್ಮ ಪಾಲಿಗೆ ಇದೆಯೆ ? – ಎಂಬುದನ್ನು ಜೀವನದಲ್ಲಿ ಕಂಡುಕೊಳ್ಳಲು ಮೊದಲು ಪ್ರಾರಂಭಿಸಬೇಕು – ಎಂದು ಇಲ್ಲಿ ತಿಳಿಸಿದಂತಾಗಿದೆ.

**ಸಂಸಾರಭೀಕರಕರೀಂದ್ರಕರಾಭಿಘಾತ–**
**ನಿಷ್ಪಿಷ್ಟಮರ್ಮವಪುಷಃ ಸಕಲಾರ್ತಿನಾಶ ।**
**ಪ್ರಾಣಪ್ರಯಾಣಭವಭೀತಿಸಮಾಕುಲಸ್ಯ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥ ೧೦ ॥**

**ಭಾವಾರ್ಥ :** ಸಂಸಾರವೆಂಬ ಭಯಂಕರವಾದ ಮದ್ದಾನೆಯ ಸೊಂಡಿಲುಗಳ ಹಿಡಿತಕ್ಕೆ ಸಿಕ್ಕಿ ಜಜ್ಜುಗುಜ್ಜಾಗಿ ಮಾಡಲ್ಪಟ್ಟ ಮರ್ಮ ಸ್ಥಾನಗಳುಳ್ಳ ಶರೀರದಿಂದ ಕೂಡಿರುವ ನಾನು ಎಲೈ, ಎಲ್ಲಾ ದುಃಖಗಳನ್ನೂ ಪರಿಹಾರಮಾಡುವವನೆ, ಈಗ ಪ್ರಾಣಗಳು ದೇಹವನ್ನು ಬಿಟ್ಟು ಅಗಲುವಂಥ ಸಂಸಾರಭಯದಿಂದ ಕಂಗೆಟ್ಟಿರುವೆನು ; ಲಕ್ಷ್ಮೀನೃಸಿಂಹನೆ, ನನಗೆ ಕರಾವಲಂಬನವನ್ನು ಕೊಡು !

**ವಿವರಣೆ :–** ಸಂಸಾರವನ್ನು ಇಲ್ಲಿ ಕೊಬ್ಬಿದ ಕಾಡಾನೆಗೆ ಹೋಲಿಸಿದೆ. ಆನೆಯು ಸಸ್ಯಾಹಾರಿಯಾದ ಪ್ರಾಣಿಯೇ ಆದರೂ ಕಾಡಿನಲ್ಲಿರುವಾಗ ಅದು ಮನುಷ್ಯನನ್ನು ಕಂಡರೆ ಅಟ್ಟಿಸಿಕೊಂಡುಬಂದು ಸೀಳಿಹಾಕುತ್ತದೆ. ತನ್ನ ಸೊಂಡಿಲಿನಿಂದ ಹಿಸುಕಿ ಮೇಲೆತ್ತಿ ಜಜ್ಜುತ್ತದೆ. ಆಗ ಮನುಷ್ಯನು ಮೃತ್ಯು ವಶನಾಗುವನು. ಹೀಗೆಯೇ ಸಂಸಾರವೆಂಬ ಈ ಕಾಡಾನೆಯ ಕೈಗೆ ಸಿಕ್ಕಿದವನ ಪಾಡೂ ಆಗಿರುತ್ತದೆ. ಆನೆಯಂತೆ ಈ ಸಂಸಾರವು ಬಹು ದೊಡ್ಡದಾಗಿರುವದು. ಎಂಥವನಿಗೂ ಇದನ್ನು ವಶದಲ್ಲಿಟ್ಟುಕೊಳ್ಳುವದು ಸುಲಭವಲ್ಲ. ಆಧ್ಯಾತ್ಮಿಕಾದಿ ಮೂರು ರೂಪಗಳಿಂದ ಹರಡಿಕೊಂಡಿರುವ ಇದು ಆನೆಗಿಂತಲೂ ಮಹತ್ತರವಾಗಿದೆ. ಜರಾಮೃತ್ಯುಗಳೆಂಬ ಇದರ ಕೋರೆದಾಡೆಗಳೂ ರೋಗವೆಂಬ

ಇದರ ಸೊಂಡಿಲೂ ಎಂಥ ಮನುಷ್ಯನನ್ನಾದರೂ ಕಬಳಿಸಿಬಿಡಬಲ್ಲದು. ಇನ್ನು ಆಗಾಗ್ಗೆ ಒದಗುವ ಸಣ್ಣಪುಟ್ಟದುಃಖಗಳೆಂಬ ಇದರ ಹೊಡೆತಗಳಿಗಂತೂ ಕೊನೆಯೇ ಇಲ್ಲ. ಮನುಷ್ಯನ ಆಯುಸ್ಸಂತೂ ಪ್ರತಿಕ್ಷಣವೂ ತೂತುಮಡಿಕೆಯಲ್ಲಿರುವ ನೀರಿನಂತೆ ನಷ್ಟವಾಗುತ್ತಿದೆ. ಈ ಆನೆಯನ್ನು ವಶಮಾಡಿಕೊಳ್ಳುವ ಉಪಾಯವೂ ಜೀವನಿಗೆ ತಿಳಿಯದು. ಹೀಗಾಗಿ ಅವನ ಪಾಡು ಬಹಳ ಖೇದಕರವಾಗಿದೆ.

ಆದರೆ ಲಕ್ಷ್ಮೀನೃಸಿಂಹನು ಇಂಥ ಮದ್ದಾನೆಯ ಹಿಡಿತದಿಂದ ನಮ್ಮನ್ನು ಬಿಡಿಸಬಲ್ಲನು. ಭಗವಂತನು ಕೃಷ್ಣಾವತಾರದಲ್ಲಿ ಕೇವಲ ತನ್ನ ಎಳನೆಯ ವಯಸ್ಸಿನಲ್ಲೇ ಕಂಸನು ಪ್ರೇರೇಪಿಸಿ ಕಳುಹಿಸಿದ ಕುವಲಯಾಪೀಡವೆಂಬ ಮದ್ದಾನೆಯನ್ನು ಸೀಳಿಹಾಕಿದ ಕಥೆಯನ್ನು ಭಾಗವತದಲ್ಲಿ ನೀವೆಲ್ಲರೂ ಕೇಳಿರುತ್ತೀರಿ. ಆದ್ದರಿಂದ ಭಗವಂತನ ದೃಷ್ಟಿಯಿಂದ ಸಂಸಾರವೆಂಬ ಮದ್ದಾನೆಯು ಒಂದು ತೃಣಮಾತ್ರವಾಗಿರುತ್ತದೆ. ಆತನ ದಯೆಯೊಂದಿದ್ದರೆ ಇದನ್ನು ಪಳಗಿಸಿ ಇದರ ಮೇಲೆ ನಾವು ಆನಂದದಿಂದ ಸವಾರಿಮಾಡಬಹುದು. ಆತನನ್ನು ಹೃದಯದಲ್ಲಿ ನೆನೆದುಕೊಂಡಲ್ಲಿ ನಾವು ಮಹಾಮಾವಟಿಗರಾಗಿ ಆನೆಯನ್ನು ಆಟವಾಡಿಸಬಹುದು. ಅದರ ಭಯವು ಒಂದಿಷ್ಟೂ ಇರುವದಿಲ್ಲ. ಹೀಗೆ ಭಗವಂತನನ್ನು ಶರಣುಹೊಕ್ಕವರು ಎಂದೆಂದಿಗೂ ಸಂಸಾರಭಯವಿಲ್ಲದೆ ಸುಖಿಗಳಾಗಿರುವರು – ಎಂದು ಅಭಿಪ್ರಾಯ.

**ಅಂಧಸ್ಯ ಮೇ ಹೃತವಿವೇಕಮಹಾಧನಸ್ಯ**
**ಚೋರೈಃ ಪ್ರಭೋ ಬಲಿಭಿರಿಂದ್ರಿಯನಾಮಧೇಯೈಃ ।**
**ಮೋಹಾನ್ಧಕೂಪಕುಹರೇ ವಿನಿಪಾತಿತಸ್ಯ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥ ೧೧॥**

**ಭಾವಾರ್ಥ :** ಎಲೈ ಪ್ರಭುವೆ, ಇಂದ್ರಿಯಗಳೆಂಬ ಹೆಸರಿನ ಬಲಿಷ್ಠರಾದ ಕಳ್ಳರುಗಳು ನನ್ನ ವಿವೇಕವೆಂಬ ಮಹತ್ತಾದ ಐಶ್ವರ್ಯವನ್ನು ಅಪಹರಿಸಿಬಿಟ್ಟಿರುವದರಿಂದ ಕುರುಡನಾಗಿದ್ದೇನೆ. ಮತ್ತು ಆ ಚೋರರು ನನ್ನನ್ನು ಕಟ್ಟಿ ಮೋಹವೆಂಬ ಕಗ್ಗತ್ತಲೆಯ ಹಾಳುಭಾವಿಯಲ್ಲಿ ಕೆಡವಿದ್ದಾರೆ.

ಹೀಗೆ ಪತಿತನಾಗಿರುವ ನನ್ನನ್ನು ಲಕ್ಷ್ಮೀನೃಸಿಂಹನೆ, ಕರಾವಲಂಬನವನ್ನು ಕೊಟ್ಟು ಕಾಪಾಡು.

**ವಿವರಣೆ :** ಛಾಂದೋಗ್ಯೋಪನಿಷತ್ತಿನಲ್ಲಿ ಒಂದು ಕಥೆಯಿದೆ. ಗಾಂಧಾರದೇಶದ ಸಾಹುಕಾರನೊಬ್ಬನು ವ್ಯಾಪಾರಕ್ಕಾಗಿ ಬೇರೊಂದು ದೇಶಕ್ಕೆ ಪ್ರಯಾಣಮಾಡುತ್ತಿದ್ದಾಗ ಮಧ್ಯಮಾರ್ಗದಲ್ಲಿ ಒಂದು ಕಾಡಿನಲ್ಲಿ ಕಳ್ಳರ ಕೈಗೆ ಸಿಕ್ಕಿಬಿದ್ದನು. ಕಳ್ಳರು ಅವನಲ್ಲಿ ಇದ್ದುದೆಲ್ಲವನ್ನೂ ದೋಚಿಕೊಂಡದ್ದಲ್ಲದೆ ಅವನ ಕಣ್ಣುಗಳನ್ನೂ ಮತ್ತು ಕೈಕಾಲುಗಳನ್ನೂ ಕಟ್ಟಿ ಒಂದು ಹಾಳುಭಾವಿಯಲ್ಲಿ ಕೆಡವಿ ಓಡಿಹೋದರು. ಆಗ ಅವನು 'ಅಪ್ಪಾ, ಕೆಟ್ಟೆನು, ಯಾರಾದರೂ ನನ್ನನ್ನು ಕಾಪಾಡಿರಿ !' ಎಂದು ಕಿರಿಚಿಕೊಳ್ಳುತ್ತಿದ್ದಾಗ ದಯಾವಂತನಾದ ಒಬ್ಬ ದಾರಿಹೋಕನು ಈ ಆರ್ತನಾದವನ್ನು ಕೇಳಿ ಭಾವಿಯಲ್ಲಿ ಇಳಿದು ನೋಡಿ ಬಂಧಿತನಾಗಿದ್ದ ಈ ಸಾಹುಕಾರನನ್ನು ಮೇಲಕ್ಕೆತ್ತಿ ಕಣ್ಣು ಕೈಕಾಲುಗಳ ಕಟ್ಟುಗಳನ್ನು ಬಿಚ್ಚಿ 'ಅಯ್ಯ, ಇದು ಇಂಥ ದೇಶವು. ನೀನು ಈಗಿರುವ ಸ್ಥಳದಿಂದ ಉತ್ತರಕ್ಕೆ ಗಾಂಧಾರದೇಶವಿದೆ, ವಿಚಾರಿಸಿಕೊಂಡು ಹೋಗು'– ಎಂದು ತಿಳಿಸಲಾಗಿ ಆ ಸಾಹುಕಾರನು ಜಾಣನಾದ್ದರಿಂದ ವಿಚಾರಮಾಡುತ್ತಾ ಹೊರಟು ಪ್ರಯಾಣಮಾಡಿ ಕೊನೆಗೆ ತನ್ನ ದೇಶವನ್ನು ತಲುಪಿ ಸುಖವಾಗಿದ್ದನು.

ಇದರಂತೆ ಈ ಜೀವನೆಂಬ ಪ್ರಯಾಣಿಕನು ಸಂಸಾರವೆಂಬ ಕಗ್ಗಾಡಿನಲ್ಲಿ ಇಂದ್ರಿಯಗಳೆಂಬ ಕಳ್ಳರ ಕೈಗೆ ಸಿಕ್ಕಿ ತನ್ನ ವಿವೇಕವೆಂಬ ಧನವನ್ನೆಲ್ಲ ಕಳೆದುಕೊಂಡು ನಾನು, ನನ್ನದು, ಹೆಂಡತಿ, ಹೊಲ, ಹಣ, ಕಾಸು – ಮುಂತಾದ ಪಾಶಗಳಿಂದ ಬಿಗಿಯಲ್ಪಟ್ಟವನಾಗಿ ಮೋಹವೆಂಬ ಭಾವಿಯಲ್ಲಿ ಬಿದ್ದಿರುತ್ತಾನೆ. ದಯಾಮಯನಾದ ಸದ್ಗುರುವೆಂಬ ದಾರಿಹೋಕನು ಇವನನ್ನು ಕಂಡು ಗುರುತಿಸಿ ತನ್ನ ಆತ್ಮಜ್ಞಾನದ ಉಪದೇಶದಿಂದ ಇವನ ಸಂಸಾರಬಂಧಗಳನ್ನು ಕಳಚಿ ಮೋಕ್ಷದ ಹಾದಿಯನ್ನು ತಿಳಿಸಿಕೊಟ್ಟಾಗ ಮೇಧಾವಿಯೂ ಪಂಡಿತನೂ ಆದ ಈ ಸಾಧಕನು ಗುರುವು ಉಪದೇಶಿಸಿದ ಮಾರ್ಗದಲ್ಲೇ ನಡೆಯುತ್ತಾ ಸಾಧನಗಳ ಬಲದಿಂದ ಮೋಕ್ಷಸಾಮ್ರಾಜ್ಯವನ್ನು ಪಡೆದು ಕೃತಕೃತ್ಯನಾಗುವನು – ಎಂದು ಆ ಕಥೆಯು ತತ್ತ್ವವನ್ನು ತಿಳಿಸುತ್ತಿದೆ.

ಇದೇ ಅಭಿಪ್ರಾಯವನ್ನೇ ಈ ಶ್ಲೋಕವು ತಿಳಿಸುತ್ತಿದೆ. ಇಲ್ಲಿ ಸಾಧಕನು ಲಕ್ಷ್ಮೀನರಸಿಂಹನನ್ನೇ ಬೇಡಿಕೊಳ್ಳುತ್ತಿದ್ದಾನೆ. 'ಪ್ರಭುವೆ, ಗಾಂಧಾರದೇಶದ ಸಾಹುಕಾರನಂತೆ ನಾನೂ ಸಹ ಇಂದ್ರಿಯಗಳೆಂಬ ಕಳ್ಳರಿಗೆ ವಶನಾಗಿ ವಿವೇಕವೆಂಬ ಧನವನ್ನು ಕಳೆದುಕೊಂಡು ಮೋಹವೆಂಬ ಬಾವಿಯಲ್ಲಿ ಬಿದ್ದಿರುವೆನು. ನನ್ನನ್ನು ಈ ಮೋಹದಿಂದ ಉದ್ಧರಿಸಿ ಕರಾವಲಂಬನವನ್ನು ಕೊಟ್ಟು ಕಾಪಾಡು'– ಎಂದು ಬೇಡಿಕೊಂಡಿರುತ್ತಾನೆ.

**ಲಕ್ಷ್ಮೀಪತೇ ಕಮಲನಾಭ ಸುರೇಶ ವಿಷ್ಣೋ**
**ವೈಕುಂಠ ಕೃಷ್ಣ ಮಧುಸೂದನ ಪುಷ್ಕರಾಕ್ಷ ।**
**ಬ್ರಹ್ಮಣ್ಯ ಕೇಶವ ಜನಾರ್ದನ ವಾಸುದೇವ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥ ೧೨ ॥**

**ಭಾವಾರ್ಥ :** ಲಕ್ಷ್ಮೀರಮಣನೆ, ಪದ್ಮನಾಭನೆ, ದೇವತೆಗಳೊಡೆಯನೆ, ವಿಷ್ಣುವೆ ವೈಕುಂಠವಾಸಿಯೆ, ಕೃಷ್ಣನೆ, ಮಧುಸೂದನನೆ, ಕಮಲನೇತ್ರನೆ, ವೇದೋದ್ಧಾರಕನೆ, ಕೇಶವನೆ, ಜನಾರ್ದನನೆ, ಲಕ್ಷ್ಮೀನೃಸಿಂಹನೆ, ನನಗೆ ಕರಾವಲಂಬನವನ್ನು ಕೊಡು.

**ವಿವರಣೆ :**– ಈ ಶ್ಲೋಕದಲ್ಲಿ ಭಗವಂತನನ್ನು ಅವನ ದಿವ್ಯನಾಮಗಳಿಂದ ಸಂಬೋಧಿಸಿ ಪ್ರಾರ್ಥಿಸಿದೆ. ಲಕ್ಷ್ಮೀಪತಿಯೆಂದದ್ದರಿಂದ ಕೇಳಿದವರಿಗೆ ಬೇಕಾದ ಐಶ್ವರ್ಯವನ್ನು ಕೊಡುವ ಸಾಮರ್ಥ್ಯವುಳ್ಳವನೆಂದಾಯಿತು. ಪದ್ಮನಾಭನೆಂದದ್ದರಿಂದ ಸೃಷ್ಟಿಕರ್ತನಾದ ಚತುರ್ಮುಖಬ್ರಹ್ಮನಿಗಿಂತಲೂ ಹಿರಿಯವನೆಂದೂ ಜಗತ್ತಿಗೇ ತಂದೆಯೆಂದೂ ತಿಳಿಸಿದಂತಾಯಿತು. ದೇವತೆಗಳೊಡೆಯನಾದ್ದರಿಂದ ಆಯಾ ದೇವತೆಗಳು ಕೊಡಬಹುದಾದ ಕಾಮಗಳೆಲ್ಲವನ್ನೂ ಇವನೇ ಕೊಡುತ್ತಾನೆಂದಾಯಿತು. ಸರ್ವವ್ಯಾಪಕನೂ ಎಂದಿಗೂ ನಾಶವಾಗದ ಸ್ಥಾನವುಳ್ಳವನೂ ಆದ್ದರಿಂದ ಆತನನ್ನು ಪಡೆದವರು ಸಂಸಾರಕ್ಕೆ ಮರಳುವದಿಲ್ಲವೆಂದು ತಿಳಿಸಿದಂತಾಗಿದೆ. ಕೃಷ್ಣನೆಂದದ್ದರಿಂದ ಭಕ್ತರ ಪಾಪಗಳನ್ನು ಸೆಳೆದು ನಾಶಪಡಿಸುವದಲ್ಲದೆ ಯಾವಾಗಲೂ ಆನಂದಸ್ವರೂಪನಾಗಿದ್ದು ತನ್ನ ಭಕ್ತರಿಗೂ ಆನಂದವನ್ನೇ ಉಂಟುಮಾಡುವವನೆಂದೂ ತಿಳಿಸಿದೆ. ಇನ್ನು ಕಮಲನೇತ್ರನೂ

ಮಧುವೆಂಬ ರಾಕ್ಷಸನನ್ನು ಸಂಹರಿಸಿದವನೂ ಆಗಿರುವದರಿಂದ ಆಸುರೀ ಸಂಪತ್ತುಗಳನ್ನು ಕಳೆದು ದೈವೀಸಂಪತ್ತನ್ನುಂಟುಮಾಡುವವನೆಂದು ಸಿದ್ಧವಾಗುತ್ತದೆ. ವೇದಗಳನ್ನು ಉದ್ಧಾರಮಾಡಿ ಧರ್ಮಮಾರ್ಗವನ್ನು ಲೋಕದಲ್ಲಿ ಪ್ರಚಾರಮಾಡಿದವನಾಗಿ, ಕೇಶಿ ಎಂಬ ರಾಕ್ಷಸನನ್ನು ಕೊಂದದ್ದರಿಂದ ಕೇಶವನೆಂದು ಸ್ತುತ್ಯನಾಗಿ, ಎಲ್ಲಾ ಜೀವರುಗಳಿಗೂ ಸದ್ಗತಿಯನ್ನು ಕರುಣಿಸುವದರಿಂದ ಜನಾರ್ದನನಾಗಿ, ಸರ್ವಭೂತಗಳಲ್ಲಿಯೂ ವಾಸಿಸುವದರಿಂದ ವಾಸುದೇವನಾಗಿ, ಋಷಿಗಳಿಂದ ಯಾವಾಗಲೂ ಹೊಗಳಲ್ಪಡುತ್ತಿರುವ ಭಗವಂತನು ಕರಾವಲಂಬನವನ್ನು ನೀಡಿ ನನ್ನನ್ನು ಕಾಪಾಡಲಿ – ಎಂದು ಭಕ್ತನು ಬೇಡಿಕೊಂಡಿರುತ್ತಾನೆ.

**ಯನ್ಮಾಯಯೋರ್ಜಿತವಪುಃ ಪ್ರಚುರಪ್ರವಾಹ–**
**ಮಗ್ನಾರ್ಥಮತ್ರ ನಿವಹೋರುಕರಾವಲಂಬಮ್ ।**
**ಲಕ್ಷ್ಮೀನೃಸಿಂಹಚರಣಾಬ್ಜಮಧುವ್ರತೇನ**
**ಸ್ತೋತ್ರಂ ಕೃತಂ ಸುಖಕರಂ ಭುವಿ ಶಂಕರೇಣ ॥ ೧೩ ॥**

**ಭಾವಾರ್ಥ :** ಯಾವ (ಭಗವಂತನ) ಮಾಯೆಯಿಂದ ಉಂಟಾದ ಸಂಸಾರದಲ್ಲಿ ಪಡೆದುಕೊಂಡಿರುವ ಶರೀರಗಳೆಂಬ ಪ್ರವಾಹದಲ್ಲಿ ಮುಳುಗಿ ಕರಾವಲಂಬನವನ್ನು ಬಯಸುತ್ತಿರುವ, ಲಕ್ಷ್ಮೀನೃಸಿಂಹದೇವನ ಪಾದಕಮಲಗಳಲ್ಲಿ ದುಂಬಿಯಂತೆ ಆಶ್ರಯಿಸಿರುವ, ಶಂಕರನಿಂದ ಈ ಸುಖವನ್ನುಂಟುಮಾಡುವ ಸ್ತೋತ್ರವು ರಚಿಸಲ್ಪಟ್ಟಿತು.

**ವಿವರಣೆ :** ಈ ಕೊನೆಯ ಶ್ಲೋಕವು ಮೂಲಕ್ಕೆ ಸೇರಿದ್ದೋ ಇಲ್ಲವೋ ತಿಳಿಯುವಂತಿಲ್ಲ. ಶಂಕರನು ಈ ಸ್ತೋತ್ರವನ್ನು ಮಾಡಿರುತ್ತಾನೆ – ಎಂಬ ಅಂಕಿತವಿದೆ. ಆ ಶಂಕರನೆಂಬುವನು ಶ್ರೀಮದಾದಿಶಂಕರಾಚಾರ್ಯರೇ ಹೌದೋ ಅಲ್ಲವೋ ತಿಳಿಯದು. ಒಟ್ಟಿನಲ್ಲಿ ಈ ಸ್ತೋತ್ರವು ಈವರೆಗೂ ವಿವರಿಸಿರುವಂತೆ ವಿಮರ್ಶಿಸಿದ್ದರಲ್ಲಿ ವೇದಾಂತಸಿದ್ಧಾಂತದ ಯಾವ ಮುಖ್ಯಪ್ರಮೇಯವನ್ನೂ ಒಳಗೊಂಡಿರುವದಿಲ್ಲ. ಆದರೆ ಸಾಹಿತ್ಯದೃಷ್ಟಿಯಿಂದ ಕಾವ್ಯಮರ್ಯಾದೆಗೆ

ಅನುಗುಣವಾಗಿ ಸುಂದರವಾಗಿ ರಚಿತವಾಗಿದೆ. ಈ ಕೊನೆಯ ಪದ್ಯದಲ್ಲಿ ಮಾತ್ರ 'ಮಾಯೆ' ಎಂಬ ಶಬ್ದದ ಪರಾಮರ್ಶವಿದೆ. ಶರೀರವು ಹುಟ್ಟಿದಾಗಲೇ ಸಂಸಾರವು ಗಂಟುಬಿದ್ದಿರುತ್ತದೆ. ಶರೀರವು ಕರ್ಮಗಳ ಫಲ ; ಕರ್ಮಗಳು ಅವಿದ್ಯೆಯ ಫಲ ; ಆದ್ದರಿಂದ ಅವಿದ್ಯಾಕಾಮಕರ್ಮಮಯವಾದ ಸಂಸಾರವು ದಾಟಲು ಅಸಾಧ್ಯವಾದ ಮಾಯೆಯೇ ಸರಿ. ಇಂಥ ಮಾಯೆಯನ್ನು ದಾಟಬೇಕಾದರೆ ಆ ಭಗವಂತನನ್ನೇ ಶರಣು ಹೋಗಬೇಕು. ಮಾಯಾತೀತನಾದ ಭಗವಂತನು ಮಾತ್ರ ಜೀವರನ್ನು ಈ ಮಾಯಾಮಯವಾದ ಸಂಸಾರದಿಂದ ವಿಮುಕ್ತಿಗೊಳಿಸಬಲ್ಲನು.

ಹೀಗೆ ಭಗವಚ್ಛರಣಾಗತಿಯೇ ಸಕಲಪಾಪಗಳಿಂದಲೂ ಮಾನವನು ಬಿಡುಗಡೆಹೊಂದಲು ಹೆಚ್ಚಿನ ಸಾಧನವೆಂಬುದನ್ನು ತಿಳಿಸಿರುವ ಈ ಸ್ತೋತ್ರವನ್ನು ಭಕ್ತರ ಉಪಯೋಗಕ್ಕಾಗಿ ವಿವರಣೆಸಮೇತ ಪ್ರಕಟಿಸಲಾಗಿದೆ. ಭಗವದ್ಭಕ್ತರು ಈ ಅಲ್ಪಸೇವೆಯನ್ನು ಸ್ವೀಕರಿಸಬೇಕಾಗಿ ಬೇಡಿದೆ.

ಇತಿ ಶ್ರೀ ಲಕ್ಷ್ಮೀನೃಸಿಂಹಕರಾವಲಂಬನಸ್ತೋತ್ರಮ್

# ಧನ್ಯಾಷ್ಟಕ

ತಜ್ಞಾನಂ ಪ್ರಶಮಕರಂ ಯದಿನ್ದ್ರಿಯಾಣಾಂ
ತಜ್ಞೇಯಂ ಯದುಪನಿಷತ್ಸು ನಿಶ್ಚಿತಾರ್ಥಮ್ ।
ತೇ ಧನ್ಯಾ ಭುವಿ ಪರಮಾರ್ಥನಿಶ್ಚಿತೇಹಾಃ
ಶೇಷಾಸ್ತು ಭ್ರಮನಿಲಯೇ ಪರಿಭ್ರಮನ್ತಿ ॥೧॥

ಭಾವಾರ್ಥ : ಇಂದ್ರಿಯಗಳಿಗೆ ಶಾಂತಿಯನ್ನು ಕೊಡುವದೇ ಜ್ಞಾನವು ; ಉಪನಿಷತ್ತುಗಳಲ್ಲಿ ಗೊತ್ತುಪಡಿಸಿರುವ ತತ್ತ್ವವೇ ತಿಳಿಯತಕ್ಕದ್ದು. ಪರಮಾರ್ಥಕ್ಕಾಗಿಯೇ ಗೊತ್ತಾಗಿ ಹವಣಿಸುತ್ತಿರುವವರೇ ಧನ್ಯರು ; ಮಿಕ್ಕವರಾದರೊ, ಭ್ರಾಂತಿಯ ಮನೆಯಲ್ಲಿ ತೊಳಲುತ್ತಿರುವರು.

ಲಘುವಿವರಣೆ : ಲೋಕದಲ್ಲಿ ಎರಡು ಬಗೆಯ ತಿಳಿವಳಿಕೆಯನ್ನು ಸಂಪಾದಿಸಬಹುದು. ಒಂದು ಬಗೆಯ ತಿಳಿವಳಿಕೆಯು ಹೆಚ್ಚಿದಷ್ಟೂ ಇಂದ್ರಿಯಗಳು ಕುಣಿದಾಡುತ್ತವೆ. ಇದೇ ವಿಷಯಗಳ ತಿಳಿವಳಿಕೆ. ಮಕ್ಕಳಿಗೆ ಇಂದ್ರಿಯ ಪಾಟವವಾಗುವದಕ್ಕೂ ಹೊರಗಿನ ವಸ್ತುಗಳ ಸ್ವಭಾವವನ್ನು ಗೊತ್ತುಪಡಿಸಿಕೊಳ್ಳುವದಕ್ಕೂ ಈ ತಿಳಿವಳಿಕೆಯು ಬೇಕಾಗಿರುವದು. ಆದರೆ ವ್ಯವಹಾರದ ಸ್ವರೂಪವನ್ನು ತಕ್ಕಮಟ್ಟಿಗೆ ಅರಿತುಕೊಂಡು ಅದರಿಂದ ಪೆಟ್ಟುತಿಂದಿರುವವನು ಮತ್ತೆ ಈ ತಿಳಿವಳಿಕೆಯಲ್ಲಿಯೇ ಬಿದ್ದು ಒದ್ದಾಡುವದು ಎಂದಿಗೂ ಸರಿಯಲ್ಲ. ಎಂಜಲಹಾಳಿಗೆ ಓಡಿಬರುವ ನಾಯಿಯಂತೆಯೂ, ಬಿಸಿಲುಕುದುರೆಯ ನೀರಿಗೆಂದು ಓಡುವ ಜಿಂಕೆಯಂತೆಯೂ, ಈ ತಿಳಿವಳಿಕೆಯ ಬೆನ್ನುಹತ್ತುವವರಿಗೆ ಬರಿಯ ಆಯಾಸವೇ ಪ್ರತಿಫಲವಾಗಿರುವದು. ಇಂದ್ರಿಯಗಳನ್ನು ಆಯಾಸಗೊಳಿಸುವ ಈ ತಿಳಿವಳಿಕೆಯನ್ನು ಜ್ಞಾನವೆಂದು ತಿಳಿಯುವದಕ್ಕಿಂತ ಅಜ್ಞಾನವೆಂದು ಕರೆಯುವದೇ ಹೆಚ್ಚು ಒಪ್ಪುತ್ತದೆ. ಇನ್ನೊಂದು ಬಗೆಯ ತಿಳಿವಳಿಕೆಯುಂಟು. ಅದನ್ನು ತಿಳಿದರೆ ಇಂದ್ರಿಯಗಳು ಹೊರಗಿನ ವಿಷಯಗಳಿಗೆ ಹಾತುವರಿಯುವದು ತಪ್ಪುತ್ತವೆ. ಮನಸ್ಸಿಗೆ ಶಾಂತಿಯೂ ಉಂಟಾಗುತ್ತದೆ. ಈ ತಿಳಿವಳಿಕೆಯೇ ನಿಜವಾದ ಜ್ಞಾನ. ಇದಕ್ಕೆ ಆತ್ಮಜ್ಞಾನವೆಂದು ಹೆಸರು.

ಆತ್ಮನೆಂದರೆ ತಾನು. ಮನುಷ್ಯನು ತನ್ನ ಸ್ವರೂಪವನ್ನರಿಯದೆ ಮಿಕ್ಕ ವಿಷಯಗಳನ್ನು ಅರಿಯುವದಕ್ಕೇ ಹವಣಿಸುತ್ತಿರುತ್ತಾನೆ. ಈ ಹವಣಿಕೆಯಿಂದ ಸಂಸಾರದಲ್ಲಿ ಬಲುಬಗೆಯ ತೊಂದರೆಗಳಾಗುತ್ತಿವೆ. ತನ್ನ ಸ್ವರೂಪವನ್ನು ತಾನರಿಯನೆಂದು ತಿಳಿಯದಿರುವದೇ ಈ ಹವಣಿಕೆಗೆ ಕಾರಣ. ಈ ಸ್ವರೂಪವನ್ನು ಉಪನಿಷತ್ತುಗಳಲ್ಲಿ ನಿಶ್ಚಯಿಸಿ ಹೇಳಿರುತ್ತದೆ ; ಅಲ್ಲಿ ನಿಶ್ಚಯಿಸಿರುವ ಆತ್ಮಸ್ವರೂಪವೇ ನಿಜವಾದ ಜ್ಞೇಯವು, ತಿಳಿದುಕೊಳ್ಳತಕ್ಕದ್ದು. ಆ ಸ್ವರೂಪಕ್ಕೆ ಬ್ರಹ್ಮವೆಂದು ಹೆಸರು.

ಲೋಕದಲ್ಲಿ ಜನರು ತಮ್ಮತಮ್ಮ ತಿಳಿವಳಿಕೆಗೆ ತಕ್ಕಂತೆ ವ್ಯವಹಾರ ಮಾಡುತ್ತಿರುವರು. ಯಾರು ವಿಷಯದ ಜ್ಞಾನವನ್ನೇ ಹೆಚ್ಚಿಸಿಕೊಳ್ಳುತ್ತಾ ಆತ್ಮಸ್ವರೂಪವನ್ನು ಮರೆತಿರುವರೋ ಅವರೆಲ್ಲರೂ ಸಂಸಾರವೆಂಬ ಕಗ್ಗಾಡಿನಲ್ಲಿ ಹೊಕ್ಕು ದಾರಿಗಾಣದೆ ತೊಳಲುತ್ತಿರುವರು. 'ಅಗೋ, ದಾರಿ, ಇಗೋ ದಾರಿ' ಎಂದು ಅವರು ಕೂಗಾಡುತ್ತಿರುವರು ; ನಿಜವಾಗಿ ಅವರಿರುವದು ಭ್ರಮನಿಲ-ಯವು, ತೊಳಲಿನ ಚಕ್ರಭೀಮನ ಕೋಟೆಯು – ಎಂಬುದನ್ನು ಅವರರಿಯರು. ಯಾರು ನಿಜವಾದ ಆತ್ಮಸ್ವರೂಪವನ್ನು ಅರಿತಿರುವರೋ, ಅದರಿಂದ ಶಾಂತಿಯನ್ನು ತಂದುಕೊಂಡಿರುವರೋ, ಅವರೇ ಧನ್ಯರು. ಅವರು ತಾವೂ ಕೃತಕೃತ್ಯರಾಗಿ ಮಿಕ್ಕವರನ್ನೂ ಸರಿಯಾದ ಹಾದಿಗೆ ಕರೆತರುವದಕ್ಕೆ ಯತ್ನಿಸುತ್ತಿರುವರು.

ಆದೌ ವಿಜಿತ್ಯ ವಿಷಯಾನ್ ಮದಮೋಹರಾಗ–  
ದ್ವೇಷಾದಿಶತ್ರುಗಣಮಾಹೃತಯೋಗರಾಜ್ಯಾಃ ।  
ಜ್ಞಾತ್ವಾಽಮೃತಂ ಸಮನುಭೂಯ ಪರಾತ್ಮವಿದ್ಯಾ–  
ಕಾನ್ತಾಸುಖಂ ವನಗೃಹೇ ವಿಹರನ್ತಿ ಧನ್ಯಾಃ ॥ ೨ ॥

ಭಾವಾರ್ಥ : ಧನ್ಯರಾದವರು, ಮೊದಲು ವಿಷಯಗಳನ್ನೂ ಮದಮೋಹರಾಗದ್ವೇಷವೇ ಮುಂತಾದ ಶತ್ರುಗಳನ್ನೂ ಗೆದ್ದು ಯೋಗ ರಾಜ್ಯವನ್ನು ವಶಗೂಳಿಸಿಕೊಂಡು ಸಾವಿಲ್ಲದ ಸುಖವನ್ನು ತಿಳಿದುಕೊಂಡು ಪರಮಾತ್ಮವಿದ್ಯೆಯೆಂಬ ಕಾಂತೆಯ ಸುಖವನ್ನನುಭವಿಸುತ್ತಾ ಅರಣ್ಯವೆಂಬ ಮನೆಯಲ್ಲಿ ವಿಹರಿಸುತ್ತಿರುವರು.

**ಲಘುವಿವರಣೆ :** ಈ ಲೋಕದಲ್ಲಿ ಪರಮಾತ್ಮಜ್ಞಾನವನ್ನು ಹೊಂದಿದವರು ಮಹಾರಾಜನಂತೆ ವ್ಯವಹರಿಸುತ್ತಿರುವರು. ಹಗೆಗಳನ್ನೆಲ್ಲ ಗೆದ್ದು ಅವರ ಕೋಟೆಯನ್ನು ತನ್ನದಾಗಿ ಮಾಡಿಕೊಂಡು ಊರೊಳಕ್ಕೆ ಹೋಗಿ ಅಲ್ಲೆಲ್ಲ ಸೌಖ್ಯಸಾಮಗ್ರಿಗಳಿರುವವೆಂಬುದನ್ನು ತಿಳಿದುಕೊಂಡು ಅರಮನೆಯನ್ನು ಸೇರಿ ನಿರ್ಭೀತಿಯಿಂದ ತನ್ನ ಅಂತಃಪುರದಲ್ಲಿ ವಿಹರಿಸುವ ಶೂರನಾದ ರಾಜನ ಹಾಗೆಯೇ ಇರುವದು ಇವರ ವರ್ತನೆ.

ಹೇಗೆಂದರೆ : ಇವರು ತಮ್ಮನ್ನು ಗುಂಡಿಯಲ್ಲಿ ಕೆಡಹುತ್ತಿರುವ ವಿಷಯಗಳ ಕಡೆಗೆ ಮನಸ್ಸನ್ನು ಜೋಲುಬಿಡದೆ, ಕಾಮಕ್ರೋಧಲೋಭಮೋಹಮದಮಾತ್ಸರ್ಯಗಳೆಂಬ ಆರು ಹಗೆಗಳನ್ನು ಮೊದಲು ಗೆದ್ದುಕೊಳ್ಳುತ್ತಾರೆ. ಆಮೇಲೆ ಚಿತ್ತವನ್ನು ಏಕಾಗ್ರವಾಗಿ ಮಾಡುವದರಿಂದ ಯೋಗವೆಂಬ ರಾಜ್ಯವನ್ನು ಸೂರೆಗೊಳ್ಳುತ್ತಾರೆ. ಈ ಒಳಗಿನ ಸಾಧನದಿಂದ ಅಮೃತಸ್ವರೂಪವಾಗಿರುವ ತಮ್ಮ ಆತ್ಮತತ್ತ್ವವನ್ನು ಕಂಡುಕೊಳ್ಳುತ್ತಾರೆ. ಆಮೇಲೆ ಅವರು ಕಾಡಿನಲ್ಲಿದ್ದರೂ ಅದೇ ಮನೆಯಾಗಿರುವದು ; ಏಕೆಂದರೆ ಮಹಾರಾಜನು ಅರಮನೆಯಲ್ಲಿ ತಮ್ಮ ಧರ್ಮಪತ್ನಿಯೊಡನೆ ಆನಂದವನ್ನನುಭವಿಸುತ್ತಿರುವಂತೆ ಅಲ್ಲಿಯೂ ಅವರು ಪರಮಾತ್ಮವಿದ್ಯೆಯಿಂದಾದ ಆನಂದವನ್ನನುಭವಿಸುತ್ತಾ ಸುಖವಾಗಿ ವಿಹರಿಸುತ್ತಿರುವರು.

**ತ್ಯಕ್ತ್ವಾ ಗೃಹೇ ರತಿಮಧೋಗತಿಹೇತುಭೂತಾ–**
**ಮಾತ್ಮೇಚ್ಛಯೌಪನಿಷದರ್ಥರಸಂ ಪಿಬನ್ತಃ।**
**ವೀತಸ್ಪೃಹಾ ವಿಷಯಭೋಗಪದೇ ವಿರಕ್ತಾಃ**
**ಧನ್ಯಾಶ್ಚರನ್ತಿ ವಿಜನೇಷು ವಿರಕ್ತಸಙ್ಗಾಃ ॥ ೩ ॥**

**ಭಾವಾರ್ಥ :** ಅಧೋಗತಿಗೆ ಕಾರಣವಾಗಿರುವ ಮನೆಮಾರೆಂಬ ಆಸಕ್ತಿಯನ್ನು ಬಿಟ್ಟು, ಮನಬಂದಂತೆ ಉಪನಿಷತ್ತಿನ ಅರ್ಥವೆಂಬ ರಸವನ್ನು ಕುಡಿಯುತ್ತಾ, ಯಾವದೊಂದರ ಹಂಬಲೂ ಇಲ್ಲದೆ, ವಿಷಯಗಳನ್ನನುಭವಿಸುವ ಸ್ಥಾನದಲ್ಲಿ ವಿರಕ್ತರಾಗಿ, ಧನ್ಯರು ಜನಸಂಗದಲ್ಲಿ ವಿರಕ್ತರಾಗಿ ಜನರಿಲ್ಲದ ಸ್ಥಳಗಳಲ್ಲಿ ಓಡಾಡುತ್ತಿರುವರು.

ಲಘುವಿವರಣೆ : ಪರಮಾತ್ಮವಿದ್ಯೆಯ ಸುಖವನ್ನು ಅವರು ಹೇಗೆ ಅನುಭವಿಸುವರೆಂದರೆ, ಮೊದಲು ಮನೆಯಮೇಲಿನ ತೊಳಲನ್ನು ತಪ್ಪಿಸಿಕೊಳ್ಳುವರು. ನನ್ನ ಮನೆಯೆಂಬ ಅಭಿಮಾನದಿಂದ ಜನರು ಮಾಡಬಾರದ ಪಾಪಗಳನ್ನೆಲ್ಲ ಮಾಡಿ ಹೆಂಡಿರುಮಕ್ಕಳು, ಹಣಕಾಸು, ಹೊಲಮನೆಗಳನ್ನು ಸಂಪಾದಿಸಿಕೊಳ್ಳುವದಕ್ಕೆ ಹೋಗಿ, ಯಾವ ಸುಖವನ್ನೂ ಪಡೆಯದೆ ಕೊನೆಗೆ ನರಕದ ಗುಂಡಿಗೆ ಬೀಳುವರೆಂಬುದನ್ನು ಮೊದಲು ಮನದಂದುಕೊಳ್ಳುವದರಿಂದ ಮನೆಯ ಕಡೆಗೆ ಅವರ ಮನಸ್ಸು ಜಗ್ಗದೆ ಇರುವದು. ಇದರ ಜೊತೆಗೆ ಯಾವಾಗ ಬೇಕೆಂದರೆ ಆಗ ಅವರಿಗೆ ಉಪನಿಷತ್ತಿನ ಅರ್ಥವಾದ ಆತ್ಮತತ್ತ್ವವೆಂಬ ಅಮೃತದ ಪಾನವು ದೊರೆಯುವದರಿಂದ ಅವರ ಆನಂದಕ್ಕೆ ಯಾವ ಕೊರತೆಯೂ ಇರುವದಿಲ್ಲ. ಎಲ್ಲಕ್ಕೂ ಹೆಚ್ಚಿನ ಆನಂದವು ಅವರಿಗೆ ದೊರೆತಿರುವದರಿಂದ ಅವರಿಗೆ ಮತ್ತೇತರ ಹಂಬಲೂ ಇರುವದಿಲ್ಲ. ಬಗೆಬಗೆಯ ವಿಷಯಗಳನ್ನು ಈ ಲೋಕದಲ್ಲಾಗಲಿ ಪರಲೋಕದಲ್ಲಾಗಲಿ ಪಡೆಯಬೇಕೆಂಬ ಆಸೆಯ ವಾಸನೆಯೂ ಅವರನ್ನು ಸೋಂಕುವದಿಲ್ಲ.

ಆದ್ದರಿಂದ ಅವರು ಜನರ ಸಂಗವನ್ನು ಬಯಸರು ; ಜನರಿಂದ ತಮಗೆ ಯಾವದಾದರೂ ಲಾಭವಾಗುವದಕ್ಕೆ ಬದಲು ಅವರ ವಿಷಯಾಸಕ್ತಿಯೇ ತಮ್ಮ ನೆಮ್ಮದಿಗೆ ಭಂಗವನ್ನು ತಂದೀತೆಂದು ಅವರು ಜನಸಂಗಕ್ಕೆ ಅಂಜುವರು. ಈ ಕಾರಣದಿಂದ ಅವರು ಆದಷ್ಟುಮಟ್ಟಿಗೂ ಏಕಾಂತವಾಸವನ್ನೇ ಮಾಡುತ್ತಿರುವರು. ಇಂಥವರೇ ಲೋಕದಲ್ಲಿ ಧನ್ಯರು.

**ತ್ಯಕ್ತ್ವಾ ಮಮಾಹಮಿತಿ ಬನ್ಧಕರೇ ಪದೇ ದ್ವೇ**
**ಮಾನಾಪಮಾನಸದೃಶಾಃ ಸಮದರ್ಶಿನಶ್ಚ ।**
**ಕರ್ತಾರಮನ್ಯಮವಗಮ್ಯ ತದರ್ಪಿತಾನಿ**
**ಕುರ್ವನ್ತಿ ಕರ್ಮಪರಿಪಾಕಫಲಾನಿ ಧನ್ಯಾಃ ॥ ೪ ॥**

ಭಾವಾರ್ಥ : ಧನ್ಯರಾದವರು, 'ನಾನು', 'ನನ್ನದು'– ಎಂಬ ಬಂಧವನ್ನುಂಟುಮಾಡುವ ಎರಡು ಪದಗಳನ್ನೂ ಬಿಟ್ಟು, ಮಾನ, ಅಪಮಾನ – ಈ ಎರಡರಲ್ಲಿಯೂ ಸಮರಾಗಿ, ಸಮದರ್ಶಿಗಳಾಗಿ, ಎಲ್ಲವನ್ನೂ

ಮಾಡುವವನು ಬೇರೊಬ್ಬನಿದಾನೆಂದೂ ನಿಶ್ಚಯಿಸಿ, ಕರ್ಮವು ಪಕ್ವವಾಗಿ ಕೊನೆಗೆ ಕೊಡುವ ಫಲಗಳನ್ನೆಲ್ಲ ಆತನಿಗೇ ಅರ್ಪಣೆಮಾಡುತ್ತಿರುವರು.

**ಲಘುವಿವರಣೆ :** ಇಂಥ ಮಹನೀಯರ ಮೇಲೆ ವ್ಯವಹಾರದ ಪರಿಣಾಮ ವೇನೂ ಆಗುವದಿಲ್ಲವೆ ? ಅವರನ್ನು ಯಾರಾದರೂ ಗೌರವಿಸಿದರೆ ಅವರು ಹಿಗ್ಗುವದಿಲ್ಲವೆ, ಬಯ್ದರೆ ಕುಗ್ಗುವದಿಲ್ಲವೆ ? ಒಳ್ಳೆಯ ಪದಾರ್ಥಗಳು ಅವರಿಗೆ ಬೇಕಾಗುವದಿಲ್ಲವೆ, ಕೆಟ್ಟವು ಬೇಡವೆನಿಸುವದಿಲ್ಲವೆ ?– ಎಂದು ಯಾರಾದರೂ ಕೇಳಬಹುದು. ನಿಜವಾಗಿ ಅವರಮೇಲೆ ವ್ಯವಹಾರದ ಕೆಟ್ಟಪರಿಣಾಮವೇನೂ ಆಗುವಹಾಗೇ ಇರುವದಿಲ್ಲ; ಏಕೆಂದರೆ, ವ್ಯವಹಾರದ ಕಟ್ಟಿಗೆ ಒಳಪಡುವಹಾಗೆ ಮಾಡುವ ಎರಡು ಅಭಿಮಾನಗಳನ್ನೂ ಅವರು ಪೂರ್ತಿಯಾಗಿ ತೊರೆದಿರುತ್ತಾರೆ. ನಾನು, ನನ್ನದು – ಎಂಬ ಅಭಿಮಾನಗಳೇ ವ್ಯವಹಾರದಲ್ಲಿ ಜನರನ್ನು ಗೋಳು ಗುಟ್ಟಿಸುವವು. ಆದರೆ ಇವರು ಈ ಅಭಿಮಾನಗಳನ್ನು ಪೂರ ತೊರೆದುಬಿಟ್ಟಿರುವದರಿಂದ ಅವರಿಗೆ ಹಿಗ್ಗುತಗ್ಗುಗಳಿರುವದಿಲ್ಲ ; ಯಾವ ವಸ್ತುಗಳಿಂದಲೂ ಅವರ ಮನಸ್ಸು ಏರುಪೇರಾಗುವದಿಲ್ಲ.

ಅವರಿಗೆ 'ನಾನು ಇಂಥದ್ದನ್ನು ಮಾಡುತ್ತೇನೆ, ಇಂಥ ಫಲವು ನನ್ನದಾಗ ಬೇಕು'– ಎಂಬ ಭಾವನೆಗಳಾಗದಿರುವದಕ್ಕೆ ಮುಖ್ಯವಾಗಿ ಒಂದು ಪ್ರಬಲ ಕಾರಣವಿದೆ. ಅದೇನೆಂದರೆ, ಈ ಲೋಕದಲ್ಲಾಗುವ ವ್ಯಾಪಾರವೆಲ್ಲ ಒಬ್ಬ ಪರಮಾತ್ಮನಿಂದಲೇ ನಡೆಯುವದು. ಆತನೇ ನಮ್ಮ ಕರ್ಮಗಳಿಗೆಲ್ಲ ಪ್ರೇರಕನು – ಎಂಬ ಭರವಸೆಯಿಂದ ಇವರು ತಾವು ಮಾಡುವ ಕರ್ಮಗಳನ್ನೂ ಅವುಗಳ ಫಲವನ್ನೂ ಆ ಪರಮಾತ್ಮನಿಗೇ ಅರ್ಪಣೆಮಾಡುತ್ತಿರುವರು. ಅಜ್ಞರಂತೆ ಇವರು 'ನಾನು ಮಾಡುತ್ತೇನೆ, ಅದರ ಫಲವು ನನ್ನದು' ಎನ್ನುವದೂ ಇಲ್ಲ; ಆದ್ದರಿಂದ ಅಂಥ ಭಾವನೆಯಿಂದಾಗುವ ಕಟ್ಟು ಅವರಿಗಾಗುವದೂ ಇಲ್ಲ. ಹೀಗೆ ನಾನುನನ್ನದೆಂಬ ಕಟ್ಟುಗಳನ್ನು ಬಿಚ್ಚಿಕೊಂಡು ಸುಖಿಸುವವರೇ ಧನ್ಯರು.

**ತ್ಯಕ್ತೈಷಣಾತ್ರಯಮವೇಕ್ಷಿತಮೋಕ್ಷಮಾರ್ಗಾ**
**ಭೈಕ್ಷಾಮೃತೇನ ಪರಿಕಲ್ಪಿತದೇಹಯಾತ್ರಾಃ।**
**ಜ್ಯೋತಿಃ ಪರಾತ್ಪರತರಂ ಪರಮಾತ್ಮಸಂಜ್ಞಂ**
**ಧನ್ಯಾ ದ್ವಿಜಾ ರಹಸಿ ಹೃದ್ಯವಲೋಕಯನ್ತಿ ॥ ೫ ॥**

**ಭಾವಾರ್ಥ** ಮೂರು ಬಗೆಯ ಬಯಕೆಗಳನ್ನೂ ಬಿಟ್ಟು, ಮೋಕ್ಷಮಾರ್ಗದಲ್ಲಿ ಆಸೆಯಿಟ್ಟವರಾಗಿ, [illegible]ಯೆಂಬ ವ್ರತದಿಂದಲೇ ಜೀವನವನ್ನು ನಡೆಸುತಾ ಎಲ್ಲಕ್ಕೂ ಹೆಚ್ಚಿನದಾದ ಪರಮಾತ್ಮನೆಂಬ ಜ್ಯೋತಿಯನ್ನು ಧನ್ಯರಾದ ದ್ವಿಜರು ಏಕಾಂತವಾಗಿ ತಮ್ಮ ಹೃದಯದಲ್ಲಿ ಕಂಡುಕೊಳ್ಳುವರು.

**ಲಘುವಿವರಣೆ** : 'ನಾನು ನನ್ನದು'– ಎಂಬ ಅಭಿಮಾನವನ್ನಿಟ್ಟು ಕೊಂಡವರು ಮೂರು ಬಗೆಯ ಬಯಕೆಗಳಿಗೆ ಬಲಿಯಾಗಿರುತ್ತಾರೆ. ಹಣವನ್ನು ಸಂಪಾದಿಸಿ ಸುಖಪಡಬೇಕು, ಹೆಂಡತಿಯನ್ನು ಮದುವೆಯಾಗಿ ಸುಖಪಡಬೇಕು, ಮಕ್ಕಳನ್ನು ಪಡೆದು ಸುಖಪಡಬೇಕು – ಎಂಬೀ ಮೂರು ಬಗೆಯ ಹಂಬಲುಗಳು ಅವರನ್ನು ಯಾವಾಗಲೂ ತಮ್ಮ ಕಡೆಗೇ ಜಗ್ಗುತ್ತಾ ಪರಾರ್ಥದ ಹಾದಿಯ ಕಡೆಗೆ ಕಣ್ಣುಹಾಕದಿರುವಂತೆ ಮಾಡಿಬಿಟ್ಟಿರುತ್ತವೆ. ಆದರೆ ಯಾರು ಈ ಮೂರು ಬಯಕೆಗಳೇ ಸಂಸಾರಬಂಧಕ್ಕೆ ಕಾರಣವೆಂದೂ ಪರಮಾತ್ಮದರ್ಶನವೇ ಈ ಬಂಧದ ಬಿಡುಗಡೆಗೆ ಮಾರ್ಗವೆಂದೂ ತಿಳಿದುಕೊಂಡಿರುವರೋ, ಅವರ ಮನಸ್ಸು ಹಣಕಾಸನ್ನು ಗುಡ್ಡೆ ಹಾಕಿಕೊಳ್ಳುವದಕ್ಕಾಗಲಿ ಸ್ತ್ರೀಸಂಗದ ಸುಖಕ್ಕಾಗಲಿ ಮಕ್ಕಳುಮರಿಗೆಂದು ಕಷ್ಟಪಡುವದಕ್ಕಾಗಲಿ ಎಂದಿಗೂ ಜೋಲುಬೀಳುವದಿಲ್ಲ. ಅವರಿಗೆ ಹಸಿವಡಗುವದಕ್ಕೆ ಒಂದು ಕವಳ ಅನ್ನವು ಸಿಕ್ಕರೂ ಸಾಕು, ಮೈಮುಚ್ಚಿಕೊಳ್ಳುವದಕ್ಕೆ ಒಂದಿಷ್ಟು ಬಟ್ಟೆಯಿದ್ದರೂ ಸಾಕು – ಅಷ್ಟರಿಂದಲೇ ಅವರು ತೃಪ್ತರಾಗುವರು. ಒಂದು ಹಿಡಿ ಭಿಕ್ಷಾನ್ನವೇ ಅವರಿಗೆ ಅಮೃತವಾಗುವದು, ಒಂದು ಹರು ಚಿಂದಿಯೇ ಅವರಿಗೆ ಪೀತಾಂಬರವಾಗಿರುವದು. ಗೇಣುಹೊಟ್ಟೆಗಾಗಿ ಹೊಡೆದಾಡುವದೂ ಮಾ[illegible]ಗಿ ಬಡಿದಾಡುವದೂ ಮನುಷ್ಯನ ಪರಮಕರ್ತವ್ಯವೆಂದು – ಅವರಿಗೆ ಎಂದಿಗೂ ತೋರುವದಿಲ್ಲ.

ಅವರು ತಮ್ಮ ಹೊಟ್ಟೆಯ ಪಾಡನ್ನು ಹೇಗೋ ಕಳೆದುಕೊಂಡು ಪರಮಾತ್ಮನೆಂಬ ಎಲ್ಲಕ್ಕೂ ಹೆಚ್ಚಿನ ಜ್ಯೋತಿಯನ್ನು ಕಂಡುಕೊಳ್ಳುವದಕ್ಕೆ ಪ್ರಯತ್ನಮಾಡುತ್ತಿರುವರು. ಹೊರಗಿನ ಸೂರ್ಯಚಂದ್ರಾದಿಗಳು ಕಣ್ಣಿದ್ದವರಿಗೆ ಬೆಳಗುವವು ; ಹೀಗೆ ಕಣ್ಣು ಬೆಳಗಿ ತೋರಿಸುವ ಚಂದ್ರಾದಿಗಳನ್ನು ಮನಸ್ಸು ತನ್ನ ಅರಿವಿನಿಂದ ಬೆಳಗುವದು, ಆದರಿಂದ ಎಲ್ಲವನ್ನೂ ಬೆಳಗುವದಕ್ಕೆ ಮನಸ್ಸೇ ನಮಗೆ

ಮೊದಲ ಬೆಳಕಾಯಿತಷ್ಟೆ. ಈ ಬೆಳಕನ್ನು ಕೂಡ ಬೆಳಗುವದು ಪರಮಾತ್ಮನ ಚೈತನ್ಯವೆಂಬ ಬೆಳಕು. ಹೊರಗೆ ಹರಿಯುವ ಇಂದ್ರಿಯಗಳನ್ನು ಒಳಕ್ಕೆಳೆದುಕೊಂಡು ಮನಸ್ಸನ್ನು ತಳಮಳವಿಲ್ಲದಂತೆ ಒಕ್ಕಡೆಗೆ ನಿಲ್ಲಿಸಿಕೊಂಡು ಈ ಪರಮಾತ್ಮನೆಂಬ ಬೆಳಕನ್ನು ಯಾರು ತಮ್ಮ ಹೃದಯದಲ್ಲಿ ಕಂಡುಕೊಳ್ಳುವರೋ ಅವರೇ ಧನ್ಯರು.

ನಾಸನ್ನ ಸನ್ನ ಸದಸನ್ನ ಮಹನ್ನ ಚಾಣು
ನ ಸ್ತ್ರೀ ಪುಮಾನ್ ನ ಚ ನಪುಂಸಕಮೇಕಬೀಜಮ್ ।
ಯೈರ್ಬ್ರಹ್ಮ ತತ್ಸಮನುಪಾಸಿತಮೇಕಚಿತ್ತೈ–
ರ್ಧನ್ಯಾ ವಿರೇಜುರಿತರೇ ಭವಪಾಶಬದ್ಧಾಃ ॥ ೬ ॥

**ಭಾವಾರ್ಥ :** ಇಲ್ಲದ್ದಲ್ಲ, ಇರುವದಲ್ಲ; ಇದ್ದೂ ಇಲ್ಲದ್ದು ಮೊದಲೇ ಅಲ್ಲ: ದೊಡ್ಡದಲ್ಲ, ಸಣ್ಣದಲ್ಲ; ಹೆಣ್ಣಲ್ಲ, ಗಂಡಲ್ಲ, ನಪುಂಸಕ ಮೊದಲೇ ಅಲ್ಲ ; ತಾನೊಂದೇ ಜಗತ್ತಿಗೆ ಕಾರಣವಾಗಿರುವದು. ಇಂಥ ಬ್ರಹ್ಮವನ್ನು ಏಕಚಿತ್ತರಾಗಿ ಯಾರು ಉಪಾಸನೆಮಾಡಿರುವರೋ ಅವರೊಬ್ಬರೇ ಧನ್ಯರು, ಅವರೊಬ್ಬರೇ ವಿರಕ್ತರಾಗಿರುತ್ತಾರೆ ಮಿಕ್ಕವರು ಸಂಸಾರ ಪಾಶದಿಂದ ಬಿಗಿವಡೆದಿರುತ್ತಾರೆ.

**ಲಘುವಿವರಣೆ :**– ಧನ್ಯರಾದವರು ಕಂಡುಕೊಳ್ಳುವ ಪರಮಾತ್ಮತತ್ತ್ವವು ಹೇಗಿರುವದು ? ಅದು ನಮ್ಮ ಅನುಭವದಲ್ಲಿರುವ ಯಾವ ವಸ್ತುವಿನಂತೆ ಇರುವದು?– ಎಂದರೆ ಅದು ಇವುಗಳಲ್ಲಿ ಯಾವದೊಂದರಂತೆಯೂ ಇರುವದಿಲ್ಲ. ಅದು ನಾಮರೂಪಗಳಿಂದ ಕೂಡಿರುವದಲ್ಲ, ದೇಶಕಾಲಗಳಲ್ಲಿ ತೋರಿಕೊಳ್ಳುವದಲ್ಲ; ಆದ್ದರಿಂದ ಅದನ್ನು ಇದೆಯೆಂದಾಗಲಿ ಇಲ್ಲವೆಂದಾಗಲಿ ಹೇಳುವದಕ್ಕಿಲ್ಲ, ಒಂದಕ್ಕೊಂದು ವಿರುದ್ಧವಾದ ಇದೆ, ಇಲ್ಲ – ಎಂಬ ಎರಡು ಧರ್ಮಗಳೂ ಇವರಲ್ಲಿವೆಯೆಂದು ಹೇಳುವದಂತೂ ಹೊಂದುವದೇ ಇಲ್ಲ. ದೊಡ್ಡದು, ಸಣ್ಣದು, ಬಿಳಿಯದು, ಕರಿಯದು – ಮುಂತಾದ ಯಾವ ಗುಣಗಳೂ ಅದರಲ್ಲಿರುವದಿಲ್ಲ. ಹುಟ್ಟುವದು, ಬೆಳೆಯುವದು, ಮಾರ್ಪಡುವದು –

ಮುಂತಾದ ಯಾವ ವಿಕಾರಗಳೂ ಅದರಲ್ಲಾಗುವದಿಲ್ಲ. ಅವನು, ಅವಳು, ಅದು – ಎಂಬ ಯಾವ ಮಾತುಗಳೂ ಅದಕ್ಕೆ ಹೊಂದುವದಿಲ್ಲ ; ಏಕೆಂದರೆ ಸ್ತ್ರೀಲಿಂಗ, ಪುಲ್ಲಿಂಗ ಮುಂತಾದ ಯಾವ ಗುರುತಗಳೂ ಅದರಲ್ಲಿರುವದಿಲ್ಲ.

ಹೀಗಿದ್ದರೂ ಈ ಆತ್ಮತತ್ತ್ವವು ಇಲ್ಲವೇಇಲ್ಲವೆಂದು ಹೇಳುವದಕ್ಕೆ ಬರುವಹಾಗಿಲ್ಲ. ಏಕೆಂದರೆ ಅದು ನಮ್ಮೆಲ್ಲರ ಸ್ವರೂಪವೇ ಆಗಿರುವದು. ಜಗತ್ತಿನಲ್ಲಿ ಕಾಣಬರುವ ಎಲ್ಲಾ ತೋರಿಕೆಗಳಿಗೂ ಅದೇ ಆಧಾರವಾಗಿರುವದು ; ಅದರ ಚೈತನ್ಯದ ಬೆಳಕಿನಿಂದಲೇ ಜಗತ್ತೆಲ್ಲವೂ ಇಂಥದ್ದೆಂದು ತಿಳಿಯಬರುತ್ತಿರುವದು. ಹೀಗೆ ಜಗತ್ತಿಗೆಲ್ಲ ತಿರುಳಾಗಿ ಜಗತ್ತಿಗೆಲ್ಲ ಕಾರಣವಾಗಿ, ಜಗತ್ತಿಗೆಲ್ಲ ಆಧಾರವಾಗಿರುವ ಈ ಆತ್ಮಚೈತನ್ಯವನ್ನು ಅದರಲ್ಲಿಯೇ ಮನಸ್ಸಿಟ್ಟು ಯಾರು ಕಂಡುಕೊಂಡಿರುವರೋ ಅವರು ಅದೊಂದನ್ನೇ ಭಕ್ತಿಯಿಂದ ಉಪಾಸನೆಮಾಡುತ್ತಾ ಮಿಕ್ಕದ್ದರಲ್ಲಿ ಅನಾಸಕ್ತರಾಗಿರುವರು. ಇಂಥವರೇ ಧನ್ಯರು. ಮಿಕ್ಕವರೆಲ್ಲ ಹೊರನೋಟದಿಂದ ವಿಷಯಸುಖಗಳಿಗೇ ಕಟ್ಟು ಬಿದ್ದಿರುವರು. ಅವರಿಗೆ ಸಂಸಾರದ ತೊಳಲು ಎಂದಿಗೂ ತಪ್ಪಿದ್ದಲ್ಲ.

ಅಜ್ಞಾನಪಙ್ಕಪರಿಮಗ್ನಮಪೇತಸಾರಂ
ದುಃಖಾಲಯಂ ಮರಣಜನ್ಮಜರಾವಸಕ್ತಮ್ ।
ಸಂಸಾರಬನ್ಧನಮನಿತ್ಯಮವೇಕ್ಷ್ಯ ಧನ್ಯಾ
ಜ್ಞಾನಾಸಿನಾ ತದವಶೀರ್ಯ ವಿನಿಶ್ಚಯನ್ತಿ ॥ ೭ ॥

ಭಾವಾರ್ಥ : ಈ ಸಂಸಾರದ ಕಟ್ಟಿನಲ್ಲಿರುವದೆಂದರೆ ಅಜ್ಞಾನವೆಂಬ ಕೆಸರಿನಲ್ಲಿ ಮುಳುಗಿರುವದು ; ಇದರಲ್ಲಿ ಯಾವ ಹುರುಳೂ ಇಲ್ಲ ; ಇದು ದುಃಖದ ತೌರು ; ಸಾವು, ಹುಟ್ಟು, ಮುಪ್ಪು – ಇವುಗಳಿಂದ ಕೂಡಿರುವದು ; ಅನಿತ್ಯವು – ಎಂದು ಧನ್ಯರು ಚೆನ್ನಾಗಿ ನೋಡಿ ತಿಳಿದುಕೊಂಡು ಜ್ಞಾನವೆಂಬ ಕತ್ತಿಯಿಂದ ಅದನ್ನು ಕತ್ತರಿಸಿ ಹಾಕಿ ಪರಮಾರ್ಥವನ್ನು ನಿಶ್ಚಯಿಸಿಕೊಳ್ಳುವರು.

**ಲಘುವಿವರಣೆ :** ಮೂಢರು ಸಂಸಾರದಲ್ಲಿಟ್ಟುಕೊಂಡಿರುವ ಭಾವನೆಯು ಮೊದಲಿನಿಂದ ಕೊನೆಯವರೆಗೂ ತಪ್ಪೇ. ಹೇಗೆಂದರೆ ಜನರು ಪರಮಾರ್ಥವನ್ನು ಅರಿಯದೆ ಅಜ್ಞಾನವೆಂಬ ಕೆಸರಿನಲ್ಲಿ ಮುಳುಗಿರುವರು ; ಆದರೂ ತಾವು ಪಂಡಿತರೆಂದುಕೊಳ್ಳುತ್ತಿರುವರು. ಸಂಸಾರದಲ್ಲೇನೂ ಹುರುಳಿಲ್ಲ; ಆದರೂ ಇದರ ಸಾರವನ್ನು ಕಂಡುಕೊಂಡು ಸುಖಪಡಬೇಕೆಂದು ಹವಣಿಸುತ್ತಿರುವರು. ಇದರಲ್ಲಿರುವದೆಲ್ಲ ನಿಜವಾಗಿ ದುಃಖವೇ, ಆದರೂ ಇಲ್ಲಿ ಸುಖವು ಸಿಕ್ಕೀತೆಂದು ನಂಬುತ್ತಿರುವರು. ಹುಟ್ಟುವದು, ಮುದುಕರಾಗುವದು, ಸಾಯುವದು – ಇವು ಯಾರಿಗೂ ತಪ್ಪಿದ್ದಲ್ಲ. ಆದರೂ ತಾವು ನಿತ್ಯಯೌವನದಿಂದ ಎಂದೆಂದಿಗೂ ಬದುಕಿರುವೆವೆಂದು ನಂಬಿ ಹಾಗೇ ವರ್ತಿಸುವರು.

ಆದರೆ ತಿಳಿದವರು ಈ ಸಂಸಾರದ ಕಟ್ಟನ್ನು ಪರಮಾರ್ಥಜ್ಞಾನವೆಂಬ ಕತ್ತಿಯಿಂದ ಕತ್ತರಿಸಿಕೊಂಡು 'ಸಾಕು, ಈ ಸಂಸಾರದಲ್ಲಿ ಇದುವರೆಗೆ ತೊಳಲಿದ್ದು; ಇನ್ನು ಮೇಲಾದರೂ ನಿಜವಾದ ಸುಖವನ್ನು ಕಂಡುಕೊಳ್ಳೋಣ' ಎಂದು ದೃಢನಿಶ್ಚಯವನ್ನು ಮಾಡಿಕೊಂಡು ಅತ್ತಕಡೆಗೇ ತಮ್ಮ ಮನಸ್ಸನ್ನು ಹಾಕಿಬಿಡುತ್ತಾರೆ. ಅಂಥವರೇ ಧನ್ಯರು.

ಶಾನ್ತೈರನನ್ಯಮತಿಭಿರ್ಮಧುರಸ್ವಭಾವೈ–
ರೇಕತ್ವನಿಶ್ಚಿತಮನೋಭಿರಪೇತಮೋಹೈಃ।
ಸಾಕಂ ವನೇಷು ವಿದಿತಾತ್ಮಪದಸ್ವರೂಪಂ
ಶಾಸ್ತ್ರೇಷು ಸಮ್ಯಗನಿಶಂ ವಿಮೃಶನ್ತಿ ಧನ್ಯಾಃ ॥ ೮ ॥

**ಭಾವಾರ್ಥ :** ಶಾಂತರಾಗಿಯೂ ಅದರಲ್ಲಿಯೇ ಬುದ್ಧಿಯನ್ನಿಟ್ಟು ಕೊಂಡವರಾಗಿಯೂ ಮನೋಹರವಾದ ಸ್ವಭಾವವುಳ್ಳವರಾಗಿಯೂ, ಪರಮಾತ್ಮನೊಬ್ಬನೇ ತತ್ತ್ವವೆಂಬುದನ್ನು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿರುವವರಾಗಿಯೂ, ಮೋಹವನ್ನೆಲ್ಲ ತೊಲಗಿಸಿಕೊಂಡವರಾಗಿಯೂ ಇರುವಂಥವರೊಡನೆ ಅರಣ್ಯಗಳಲ್ಲಿದ್ದುಕೊಂಡು ಶಾಸ್ತ್ರಸಿದ್ಧವಾದ ಆತ್ಮತತ್ತ್ವವನ್ನು ಧನ್ಯರಾದವರು ವಿಚಾರಮಾಡುತ್ತಿರುವರು.

**ಲಘುವಿವರಣೆ :** ಯಾರು ಸಂಸಾರದಲ್ಲಿ ವಿರಕ್ತರಾಗಿರುವರೋ ಯಾರಿಗೆ ಪರಮಾರ್ಥವೇ ಬೇಕೋ ಅವರು ಅದನ್ನು ಬಲ್ಲ ಜ್ಞಾನಿಗಳ ಸಹವಾಸವನ್ನೇ ಮಾಡಿಕೊಳ್ಳಬೇಕು. ಅವರಿಂದಲೇ ವೇದಾಂತಶಾಸ್ತ್ರದಲ್ಲಿ ಹೇಳಿರುವ ಪರಮಾತ್ಮತತ್ತ್ವವನ್ನು ತಿಳಿದುಕೊಂಡು ಮನಗಾಣಬೇಕು.

ಜ್ಞಾನಿಗಳೆಂದರೆ ಹೇಗಿರುವರು ? ಅವರು ಇಂದ್ರಿಯಗಳ ಉಪಟಳವನ್ನು ತಡೆದುಕೊಂಡಿರುವರು. ಅವರಿಗೆ ಪರಮಾತ್ಮನೊಬ್ಬನ ಹೊರತು ಮತ್ತೇತರಲ್ಲಿಯೂ ಮನಸ್ಸು ಹೋಗುವದಿಲ್ಲ. ಅವರು ಎಲ್ಲರಿಗೂ ಸಂತೋಷವಾಗುವ ರೀತಿಯಲ್ಲಿ ನಡೆದುಕೊಳ್ಳುತ್ತಿರುವರು. ಪರಮಾತ್ಮನೊಬ್ಬನೇ ಸತ್ಯ, ಮಿಕ್ಕದ್ದೆಲ್ಲವೂ ಮಿಥ್ಯೆ – ಎಂಬ ಪರಮಾರ್ಥವನ್ನು ನಿಸ್ಸಂಶಯವಾಗಿ ಅರಿತುಕೊಂಡು ಮನದ ಮೋಹವೆಲ್ಲವನ್ನೂ ತೊಲಗಿಸಿಕೊಂಡಿರುವರು. ಮನುಷ್ಯನು ತನಗೆ ಯಾವದಾದರೂ ವಸ್ತುವು ಬೇಕೆಂದರೆ ಅದು ಯಾರಲ್ಲಿರುವದೋ ಯಾರಿಂದ ತನಗೆ ಸುಲಭವಾಗಿ ದೊರಕೀತೋ ಅವರ ಬಳಿಗೆ ಹೋಗಿ ಅದನ್ನು ದೊರಕಿಸಿ ಕೊಳ್ಳುತ್ತಾನಲ್ಲವೆ ? ಇದರಂತೆ ತತ್ತ್ವವನ್ನು ಕಂಡುಕೊಳ್ಳಬೇಕೆಂಬಾತನೂ ಹಾಗೆಯೇ ಮಾಡಬೇಕು. ವ್ಯವಹಾರದಲ್ಲಿ ವಿರಕ್ತರಾಗಿರುವ ಜ್ಞಾನಿಗಳು ಅರಣ್ಯದಲ್ಲಿದ್ದರೂ ಅವರ ಬಳಿಗೇ ಹೋಗಿ, ಅವರಿಂದ ಶಾಸ್ತ್ರಾರ್ಥವನ್ನು ಕೇಳಿ ಮನಸ್ಸಿನಲ್ಲಿ ಅದನ್ನು ಚೆನ್ನಾಗಿ ಮೆಲುಕುಹಾಕಿ, ತತ್ತ್ವವನ್ನು ಮನಗಾಣುವದಕ್ಕೆ ಎಡೆಬಿಡದೆ ಪ್ರಯತ್ನಮಾಡಬೇಕು. ಯಾರು ಹೀಗೆ ಜ್ಞಾನಿಗಳಾದ ಸಾಧುಗಳ ಸಂಗದಲ್ಲಿಯೇ ಶಾಸ್ತ್ರವಿಚಾರವನ್ನು ಮಾಡುತ್ತಾ ಕಾಲವನ್ನು ಕಳೆಯುವರೋ ಅವರೇ ಧನ್ಯರು.

# ಕೆಲವು ಸ್ತೋತ್ರಗಳು

೧. ಗಣೇಶಾಷ್ಟಕ : ಗಣೇಶಪುರಾಣದಿಂದ ಆರಿಸಿದ ಸ್ತೋತ್ರ. ಪ್ರಪಂಚವೆಲ್ಲವೂ ಬ್ರಹ್ಮವೇ – ಎಂಬ ಸಿದ್ಧಾಂತವನ್ನು ಮನೋಹರರೀತಿಯಿಂದ

೨. ಶಿವನಾಮಾಷ್ಟೋತ್ತರಶತಕ : ಶಿವರಹಸ್ಯದಲ್ಲಿರುವ ಗೌರೀನಾರಾಯಣ ಸಂವಾದರೂಪವಾದ ಸ್ತೋತ್ರವಿದು. ಅರ್ಥವಿವರಣೆ ಸಹಿತವಾಗಿದೆ. ಅಷ್ಟೋತ್ತರ ಶತನಾಮಾವಳಿಯನ್ನೂ ಕೊಟ್ಟಿದೆ.

೩. ಶಿವಮಹಿಮ್ನಃ ಸ್ತೋತ್ರ : ಶಿವಭಕ್ತರಿಗೆಲ್ಲ ಪ್ರಿಯವಾಗಿರುವ ಪುಷ್ಪದಂತ ವಿರಚಿತವಾದ ಈ ಸ್ತೋತ್ರವು ಮೂಲ, ಪ್ರತಿಪದಾರ್ಥ, ತಾತ್ಪರ್ಯ, ವಿವರಣೆ ಗಳೊಡನೆ ಕೂಡಿದೆ.

೪. ಶಿವಾನಂದಲಹರೀ : ಹೆಸರಿಗೆ ತಕ್ಕಂತೆ ಭಕ್ತರ ಹೃದಯದಲ್ಲಿ ಆನಂದದ ಹೆದ್ದೆರೆಗಳನ್ನು ಎಬ್ಬಿಸುವ ಈ ಸ್ತೋತ್ರವು ಮೂಲವಿವರಣೆ ಸಮೇತವಾಗಿದೆ.

೫. ಮೂಲರಾಮಾಯಣಮ್ : ಶ್ರೀಮದ್ವಾಲ್ಮೀಕಿರಾಮಾಯಣದ ಬಾಲ ಕಾಂಡದ ಮೊದಲನೆಯ ಸರ್ಗವನ್ನು ಮೂಲ, ಕನ್ನಡ ಅನುವಾದ ಸಮೇತ ಕೊಡ ಲಾಗಿದೆ. ರಾಮಾಯಣದ ಪೂರ್ಣಕಥೆಯು ಸಂಕ್ಷೇಪವಾಗಿದೆ.

೬. ಸ್ತೋತ್ರಮಾಲಾ – ಭಾಗ –೧ : ಇದರಲ್ಲಿ (೧) ಅನುಸ್ಮೃತಿ, (೨) ಗಜೇಂದ್ರಮೋಕ್ಷ, (೩) ಭೀಷ್ಮಸ್ತವರಾಜ, (೪) ಹರಿಶರಣಾಷ್ಟಕ, (೫) ಆದಿತ್ಯ ಹೃದಯ – ಎಂಬ ಐದು ಕೃತಿಗಳಿವೆ. ಭಾವಾರ್ಥವನ್ನೂ ವಿವರಣೆಯನ್ನೂ ಕೊಡಲಾಗಿದೆ. ವಿವರಣೆಗಳಿಲ್ಲದವುಗಳಿಗೆ ಟಿಪ್ಪಣಿಗಳನ್ನು ಕೊಡಲಾಗಿದೆ. ವಿಷ್ಣುಭಕ್ತರಿಗಲ್ಲ ಪ್ರಿಯವಾಗಿರುವ ಗ್ರಂಥವಿದು.

**ಪುಸ್ತಕಗಳ ಪೂರ ಬೆಲೆಪಟ್ಟಿಗೆ ಬರೆದುಕೊಳ್ಳಿರಿ**


**ಅಧ್ಯಾತ್ಮಪ್ರಕಾಶ ಕಾರ್ಯಾಲಯ**
ನಂ.೬೪, ೨ನೇ ಬ್ಲಾಕ್, ತ್ಯಾಗರಾಜನಗರ
ಬೆಂಗಳೂರು – 28 ; ದೂ.–6765548

**ಅಧ್ಯಾತ್ಮಪ್ರಕಾಶ ಕಾರ್ಯಾಲಯ**
ಹೊಳೆನರಸೀಪುರ : 573211
ದೂ. : 08175–573820